ಸಂಪುಟ 01 | ಸಂಚಿಕೆ 209 | ಗುರುವಾರ 25 ಜೂನ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಅಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ಅಂತರರಾಷ್ಟ್ರೀಯ ನಾವಿಕರ ದಿನ (Day of the Seafarer): ಜಾಗತಿಕ ವ್ಯಾಪಾರ ಮತ್ತು ಆರ್ಥಿಕತೆಗೆ ನಾವಿಕರು ನೀಡುವ ಕೊಡುಗೆಯನ್ನು ಗುರುತಿಸಲು ಈ ದಿನವನ್ನು ಆಚರಿಸಲಾಗುತ್ತದೆ.

2) ವಿಶ್ವ ವಿಟಿಲಿಗೊ ದಿನ (World Vitiligo Day): ಚರ್ಮದ ಮೇಲಿನ ಬಿಳಿ ಕಲೆಗಳ (ವಿಟಿಲಿಗೊ) ಬಗ್ಗೆ ಜಾಗೃತಿ ಮೂಡಿಸಲು ಮತ್ತು ರೋಗಿಗಳಿಗೆ ಬೆಂಬಲ ಸೂಚಿಸಲು ಈ ದಿನವನ್ನು ಆಚರಿಸಲಾಗುತ್ತದೆ.

## ಸುಭಾಷಿತ

ನಾವು ಇನ್ನೊಬ್ಬರ ಅಭಿಪ್ರಾಯಗಳನ್ನು ಒಪ್ಪಲೇ ಬೇಕೆಂದೇನೂ ಇಲ್ಲ. ಆದರೆ, ಅವುಗಳನ್ನು ಗೌರವಿಸಲೇಬೇಕು.

ಟೇಲರ್ ಸ್ವಿಫ್ಟ್ ಗಾಯಕಿ

## "ವಿದ್ಯುತ್ ಕಡಿತ ಗ್ರಾಹಕನಿಂದ ಕಚೇರಿಗೆ ಬೆಂಕಿ"

ನೈಜ್ಯ ದೆಸೆ ನ್ಯೂಸ್

**ಸಿರವಾರ: ತಾಲೂಕಿನ ಎನ್ ಹೊಸೂರು ಗ್ರಾಮದಲ್ಲಿ ಮನೆಯ ವಿದ್ಯುತ್ ಕಡಿತಗೊಳಿಸಿದ್ದರಿಂದ ಆಕ್ರೋಶಗೊಂಡ ಗ್ರಾಹಕ ಕಚೇರಿಯ ಕಂಪ್ಯೂಟರ್ ಸೇರಿದಂತೆ ವಿವಿಧ ಉಪಕರಣಗಳಿಗೆ ಬೆಂಕಿ ಹಚ್ಚಿದ ಘಟನೆ ಜೂ.23ರ ಮಂಗಳವಾರ ನಡೆದಿದೆ.**



ತಾಲೂಕಿನ ಎನ್ ಹೊಸೂರು ಗ್ರಾಮದ ಶಿವಪ್ಪ ಗಡಿಗಿ ಎಂಬವರ ಮನೆಗೆ ಮಂಗಳವಾರ ಮಲ್ಲಟ ವಿದ್ಯುತ್ ಕೇಂದ್ರದ ಸಿಬ್ಬಂದಿಗಳು ವಿದ್ಯುತ್ ಬಾಕಿ ವಸೂಲಿಗೆ ತೆರಳಿದ್ದಾಗ ಬಾಕಿ ಪಾವತಿಸದೆ ಇರುವುದರಿಂದ ಮನೆಯ ವಿದ್ಯುತ್ ಸಂಪರ್ಕ ಕಡಿತಗೊಳಿಸಿ ಬಂದಿದ್ದರು. ನಂತರ ಕಚೇರಿಗೆ ಆಗಮಿಸಿದ ಗ್ರಾಹಕ ಶಿವಪ್ಪ ಮಧ್ಯಾಹ್ನ ತಾಲೂಕಿನ ಮಲ್ಲಟ ಗ್ರಾಮದಲ್ಲಿರುವ ಜೆಸ್ಕಾಂಂ-ನಲ್ಲಿರುವ ಕಂಪ್ಯೂಟರ್ ಹಾಗೂ ಲೈನ್ ಮ್ಯಾನ್ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಲು ಮುಂದಾಗಿದ್ದಾನೆ. ತಕ್ಷಣ ಲೈನ್ ಮ್ಯಾನ್ ಭಯದಲ್ಲಿ ತಪ್ಪಿಸಿಕೊಂಡು ಬಂದಿದ್ದು ಕಚೇ-ರಿಯ ಕಂಪ್ಯೂಟರ್ ಸುಟ್ಟು ಕರಕಲಾಗಿದೆ ಕಚೇರಿಯ ದಾಖಲೆಗಳು ಹಾಳಾಗಿವೆ. ಈ ಕುರಿತು ಯಾವುದೇ ಪ್ರಕರಣ ದಾಖಲಾಗಿಲ್ಲ.

# ಟಿಬಿ ಡ್ಯಾಂ ಕ್ರೆಸ್ಟ್ ಗೇಟ್, ಇಂದು ಲೋಕಾರ್ಪಣೆ

ನೈಜ್ಯ ದೆಸೆ ನ್ಯೂಸ್

**ವಿಜಯನಗರ: ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಜೀವನಾಡಿಯಾಗಿರುವ ತುಂಗಭದ್ರಾ ಅಣೆಕಟ್ಟೆಯಲ್ಲಿ ನೂತನವಾಗಿ ಅಳವಡಿಸಲಾಗಿರುವ 33 ಕ್ರೆಸ್ಟ್ ಗೇಟ್‌ಗಳ ಉದ್ಘಾಟನೆ ನಾಳೆ ನಡೆಯಲಿದ್ದು, ಈ ಕಾರ್ಯಕ್ರಮ ಐತಿಹಾಸಿಕ ಮಹತ್ವ ಪಡೆದುಕೊಂಡಿದೆ.**

ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಒಂದೇ ವೇದಿಕೆಯಲ್ಲಿ ಭಾಗವಹಿಸಲಿದ್ದು, ತುಂಗಭದ್ರಾ ಅಣೆಕಟ್ಟೆ ಮತ್ತೊಮ್ಮೆ ರಾಷ್ಟ್ರದ ಗಮನ ಸೆಳೆಯುತ್ತಿದೆ. ಮುನಿರಾಬಾದ್‌ನ ಸರ್ಕಾರಿ ಪ್ರೌಢಶಾಲೆ ಮೈದಾನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಕರ್ನಾಟಕ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನೇತೃತ್ವ ವಹಿಸಲಿದ್ದು, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳು, ಕೇಂದ್ರದ ಹಲವು ಸಚಿವರು ಮತ್ತು ಹಿರಿಯ ಅಧಿಕಾರಿಗಳು ಭಾಗವಹಿಸಲಿದ್ದಾರೆ.

ಅಣೆಕಟ್ಟೆ ಮೇಲೆಯೇ ಮೊದಲು ನೂತನ ಕ್ರೆಸ್ಟ್ ಗೇಟ್‌ಗಳ ಉದ್ಘಾಟನೆ ನೆರವೇರಲಿದ್ದು, ಬಳಿಕ ವೇದಿಕೆ ಕಾರ್ಯಕ್ರಮ ನಡೆಯಲಿದೆ. ನಂತರ ತುಂಗಭದ್ರಾ ಜಲಾಶಯದ



ಹೂಳು ತೆರವು, ಸಮಾನಾಂತರ ಜಲಾಶಯ ನಿರ್ಮಾಣ ಸೇರಿದಂತೆ ಪ್ರಮುಖ ಜಲಸಂಪನ್ಮೂಲ ಯೋಜನೆಗಳ ಕುರಿತು ಉನ್ನತ ಮಟ್ಟದ ಸಭೆ ನಡೆಯುವ ಸಾಧ್ಯತೆಯಿದೆ.

2024ರ ಆಗಸ್ಟ್ 10ರಂದು ರಾತ್ರಿ ತುಂಗಭದ್ರಾ ಅಣೆಕಟ್ಟೆಯ 19ನೇ ಕ್ರೆಸ್ಟ್ ಗೇಟ್ ಕೊಚ್ಚಿಕೊಂಡು ಹೋಗಿದ್ದ ಘಟನೆ ದೇಶಾದ್ಯಂತ ಆತಂಕ ಸೃಷ್ಟಿಸಿತ್ತು. ಪರಿಣಾಮವಾಗಿ ಅಪಾರ ಪ್ರಮಾಣದ ನೀರು ನದಿಗೆ ಹರಿದು ಹೋಗಿದ್ದು, ರೈತರಲ್ಲಿ ಕಳವಳ ಮೂಡಿಸಿತ್ತು. ಈ ಘಟನೆ ನಡೆದ ತಕ್ಷಣ ಅಂದಿನ ಜಲಸಂಪನ್ಮೂಲ ಸಚಿವರಾಗಿದ್ದ ಡಿ.ಕೆ. ಶಿವಕುಮಾರ್ ಸ್ಥಳಕ್ಕೆ ಭೇಟಿ ನೀಡಿ ತುರ್ತು ಕ್ರಮ ಕೈಗೊಂಡಿದ್ದರು. ತಜ್ಞರ ಸಲಹೆ ಮೇರೆಗೆ ಸ್ಟಾಪ್‌ಲಾಗ್ ಗೇಟ್ ಅಳವಡಿಸಿ ನೀರಿನ ಹ-ರಿವನ್ನು ನಿಯಂತ್ರಿಸಲಾಗಿತ್ತು. ಆದಾಗ್ಯೂ ಸುಮಾರು 35 ಟಿಎಂಸಿ ಅಡಿ ನೀರು ನದಿಗೆ ಹರಿದು ಹೋಗಿತ್ತು. ನಂತರ ಸರ್ಕಾರ ಎಲ್ಲ 33 ಕ್ರೆಸ್ಟ್ ಗೇಟ್‌ಗಳನ್ನು ಬದಲಿಸುವ ಮಹತ್ವದ ನಿರ್ಧಾರ ಕೈಗೊಂಡಿತ್ತು.

70 ವರ್ಷಗಳ ಬಳಿಕ ಸಂಪೂರ್ಣ ಗೇಟ್ ಬದಲಾವಣೆ : 1945ರಲ್ಲಿ ಆರಂಭಗೊಂಡ ತುಂಗಭದ್ರಾ ಅಣೆಕಟ್ಟೆ ನಿರ್ಮಾಣ ಕಾಮಗಾರಿ 1953ರಲ್ಲಿ ಪೂರ್ಣಗೊಂಡಿತ್ತು. 1953ರಿಂದ 1958ರ ಅವಧಿಯಲ್ಲಿ ಅಳವಡಿಸಲಾದ ಕ್ರೆಸ್ಟ್ ಗೇಟ್‌ಗಳು ಸುಮಾರು ಏಳು ದಶಕಗಳ ಕಾಲ ಸಮರ್ಥವಾಗಿ ಕಾರ್ಯನಿರ್ವಹಿಸಿದ್ದವು. ಈಗ ಮೊದಲ ಬಾರಿಗೆ ಎಲ್ಲ 33 ಗೇಟ್‌ಗಳನ್ನು ಸಂಪೂರ್ಣವಾಗಿ ಬದಲಿಸಿ ನೂತನ ಗೇಟ್‌ಗಳನ್ನು ಅಳವಡಿಸಲಾಗಿದೆ.

ಉದ್ಘಾಟನೆಗೆ ಮುನ್ನ ಬಿಡುಗಡೆ ಮಾಡಿದ ವಿಡಿಯೊ ಸಂದೇಶದಲ್ಲಿ ಡಿ.ಕೆ. ಶಿವಕುಮಾರ್ ಅವರು ಟೀಕೆಗಳು ಸಾಯುತ್ತವೆ, ಕೆಲಸಗಳು ಉಳಿಯುತ್ತವೆ. ಸರ್ಕಾರ ನುಡಿದಂತೆ ನಡೆದುಕೊಂಡಿದೆ. ರೈತರ ಹಿತದೃಷ್ಟಿಯಿಂದ ತುಂಗಭದ್ರಾ ಅಣೆಕಟ್ಟೆಯ ಎಲ್ಲಾ ಕ್ರೆಸ್ಟ್ ಗೇಟ್‌ಗಳನ್ನು ಬದಲಿಸಿ ಹೊಸ ಗೇಟ್‌ಗಳನ್ನು ಅಳವಡಿಸಲಾಗಿದೆ ಎಂದು ಹೇಳಿದ್ದಾರೆ.

**ಭದ್ರತಾ ಸಿದ್ಧತೆ ಪೂರ್ಣ :** ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮುನಿರಾಬಾದ್ ಹಾಗೂ ಅಣೆಕಟ್ಟೆ ಪ್ರದೇಶದಲ್ಲಿ ವ್ಯಾಪಕ ಭದ್ರತಾ ವ್ಯವಸ್ಥೆ ಕಲ್ಪಿಸಲಾಗಿದೆ. ಸಾವಿರಾರು ರೈತರು, ಸಾರ್ವಜನಿಕರು ಮತ್ತು ವಿವಿಧ ಜಿಲ್ಲೆಗಳ ಜನಪ್ರತಿನಿಧಿಗಳು ಕಾರ್ಯಕ್ರಮದಲ್ಲಿ

# ವಸತಿ ನಿವೇಶನ ಮೂಲಭೂತ ಸೌಕರ್ಯ ಒದಗಿಸಿ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ವಸತಿ ನಿವೇಶನ, ಸರ್ಕಾರಿ ಪದವಿ ಕಾಲೇಜು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ತಾಲೂಕು ಘಟಕ ನೇತೃತ್ವದಲ್ಲಿ ಸ್ಥಳೀಯ ಗ್ರಾಪಂ ಹತ್ತಿರ ಬುಧವಾರ ಪ್ರತಿಭಟನೆ ನಡೆಸಲಾಯಿತು.**

ರಾಜ್ಯ ಸಂಘಟನಾ ಸಂಚಾಲಕ ಹನುಮಂತಪ್ಪ ಕಾಕರಗಲ್ ಮಾತನಾಡಿ, ಅರಕೇರಾ ಪಟ್ಟಣ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ವಸತಿ ರಹಿತ ಮತ್ತು ನಿವೇಶನ ರಹಿತ ಕುಟುಂಬಗಳ ಸಂಖ್ಯೆ ಹೆಚ್ಚಾಗಿದ್ದು, ಬಡ ಕೂಲಿ ಕಾರ್ಮಿಕರು, ಬೀದಿಬದಿ ವ್ಯಾಪಾರಸ್ಥರು ಹಾಗೂ ಆರ್ಥಿಕವಾಗಿ




ಹಿಂದುಳಿದ ಕುಟುಂಬಗಳು ಒಂದೇ ಮನೆಯಲ್ಲಿ ಹಲವು ಕುಟುಂಬಗಳೊಂದಿಗೆ ವಾಸಿಸುವ ದುಸ್ಥಿತಿ ಎದುರಿಸುತ್ತಿವೆ. ಖಾಸಗಿ ನಿವೇಶನ ಖರೀದಿಸಿ ಮನೆ ನಿರ್ಮಿಸಿಕೊಳ್ಳಲು ಸಾಧ್ಯವಾಗದೆ ಅನೇಕ ಕುಟುಂಬಗಳು ಸಂಕಷ್ಟ ಅನುಭವಿಸುತ್ತಿದ್ದು, ಸರ್ಕಾರ ತಕ್ಷಣ ವಸತಿ ಸಮಸ್ಯೆ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ತಾಲೂಕು ಸಂಚಾಲಕ ಶಿವಪ್ಪ ಪಲಕನಮರಡಿ ಮಾತನಾಡಿ, ಪಟ್ಟಣದಲ್ಲಿ ಸರ್ಕಾರಿ ಪ್ರಥಮ ದರ್ಜೆ ಪದವಿ ಕಾಲೇಜು ಮಂಜೂರು, ಸರ್ಕಾರಿ ಭೂಮಿಯಲ್ಲಿ ವಸತಿ ಬಡಾವಣೆ ನಿರ್ಮಿಸಿ ನಿವೇಶನ ಹಂಚಿಕೆ, ಎಸ್ಸಿ, ಎಸ್ಟಿ ಸಮುದಾಯದ ವಸತಿ ರಹಿತರಿಗೆ ಮನೆ ನಿರ್ಮಾಣಕ್ಕಾಗಿ ತಲಾ ರೂ.5 ಲಕ್ಷ ಆರ್ಥಿಕ ನೆರವು, ನಮೂನೆ-57ರಡಿ

4ನೇ ಪುಟಕ್ಕೆ

## ಪ್ರಭುಕ್ಯಾಂಪಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ನೂತನ ಎಸ್‌ಡಿಎಂಸಿ ರಚನೆ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಪಟ್ಟಣದ ಸಕ್ಕರೆ ಕಾರ್ಖಾನೆ ಬಳಿಯಲ್ಲಿರುವ ತಾಲೂಕಿನ ನಂ.10 ಮುದ್ದಾಪುರ ಗ್ರಾಪಂಗೆ ಒಳಪಡುವ ಪ್ರಭುಕ್ಯಾಂಪಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ನೂತನ ಎಸ್‌ಡಿಎಂಸಿ ರಚಿಸಿ, ಪದಾಧಿಕಾರಿಗಳನ್ನು ಸರ್ವಾನುಮತದಿಂದ ಬುಧವಾರ ಆಯ್ಕೆ ಮಾಡಲಾಯಿತು.**

ನೂತನ ಅಧ್ಯಕ್ಷರಾಗಿ ಸತ್ಯ, ಉಪಾಧ್ಯಕ್ಷರಾಗಿ ಎನ್.ಪ್ರತಾಪ್, ಸದಸ್ಯರಾದ ಸುನೀಲ್ ಕುಮಾರ, ವೆಂಕಟೇಶ, ಜಗದೀಶ, ನಿಂಗಮ್ಮ, ಭಾರತಿ, ಆಧಿಲಕ್ಷ್ಮಿ, ಅನೀತಾ, ಲಕ್ಷ್ಮಿ, ನರೇಂದ್ರ ಬಾಬು, ಮಹೇಶ, ಬಾಷಾ, ಉಮೇಶ, ಗಣೇಶ, ತನುಜಾ ಅವಿರೋಧವಾಗಿ ಆಯ್ಕೆಗೊಂಡರು.ಮುಖ್ಯಗುರು



ವೀರಕುಮಾರ ಇವರು ಚುನಾವಣಾಧಿಕಾ-ರಿಯಾಗಿ ಕಾರ್ಯನಿರ್ವಹಿಸಿದರು. ನಂತರ ನೂತನ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪದಾಧಿಕಾರಿಗಳಿಗೆ ಮಾಲಾರ್ಪಣೆಯೊಂದಿಗೆ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಂಪ್ಲಿ ತಾಲೂಕು ಅಧ್ಯಕ್ಷ ಹನುಮಂತಪ್ಪ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಸಿ.ನಾಗರಾಜ, ಮುಖಂಡರಾದ ತಿಮ್ಮಪ್ಪ, ವಿ. ಹೊನ್ನೂರಪ್ಪ, ಎನ್.ಹೊನ್ನೂರಪ್ಪ, ಎನ್. ಮಲ್ಲಿಕಾರ್ಜುನ ಸೇರಿದಂತೆ ಇತರರು ಇದ್ದರು.

## ಗೃಹ ಘಟಕಾಧಿಕಾರಿ ಹೆಚ್. ಗಿರಿಧರ್‌ಗೆ ಭಾರತ ಭೂಷಣ ರಾಷ್ಟ್ರ ಪ್ರಶಸ್ತಿ ಪುರಸ್ಕಾರ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಬುಧವಾರದಂದು ಬಾಗಲಕೋಟೆ ನಗರದ ಲಯನ್ಸ್ ಕ್ಲಬ್‌ನಲ್ಲಿ ಅಂತರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕ ವಿಜಯಪುರ ಜಿಲ್ಲಾ ಪರಿಷತ್ ವತಿಯಿಂದ ಹಮ್ಮಿಕೊಂಡಿದ್ದ ಸಂಸ್ಕೃತಿ-ಕ ಸಿರಿ ಉತ್ಸವ ಹಾಗೂ ರಾಷ್ಟ್ರ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ಭದ್ರತೆ ಸಮಾಜ ಸೇವಾ ಕ್ಷೇತ್ರದಲ್ಲಿನ ಅಪಾರ ಸೇವೆಯನ್ನು ಗುರುತಿಸಿ,**

ಕಂಪ್ಲಿ ಗೃಹ ರಕ್ಷಕದಳದ ಘಟಕಾಧಿಕಾರಿ ಹೆಚ್.ಗಿರಿಧರ್ ಇವ-ರಿಗೆ 2026ರ ಪ್ರಸ್ತುತ ಭಾರತ ಭೂಷಣ ರಾಷ್ಟ್ರ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪ್ರಶಸ್ತಿ ಪುರಸ್ಕೃತ ಹೆಚ್.ಗಿರಿಧರ್ ಮಾತನಾಡಿ, ಹಲವು ವರ್ಷಗಳಿಂದ ಗೃಹ ರಕ್ಷಕದಳದಲ್ಲಿ ಸೇವೆ ಮಾಡುವ ಜೊತೆಗೆ ಸಮಾಜಮುಖಿ ಕೆಲಸಗಳನ್ನು ಮಾಡಿಕೊಂಡು ಬರಲಾಗಿದೆ. ಎಲೆಮರೆ ಕಾಯಿಯಂತಿರುವ ನಮ್ಮ




ಸೇವೆಯನ್ನು ಗುರುತಿಸಿ, ಅಂತರಾಷ್ಟ್ರೀಯ ಹಿಂದೂ ಮಹಾಸಭಾ ಕರ್ನಾಟಕ ವಿಜಯಪುರ ಜಿಲ್ಲಾ ಪರಿಷತ್‌ನವರು ಭಾರತ ಭೂಷಣ ರಾಷ್ಟ್ರ ಪ್ರಶಸ್ತಿ ನೀಡಿರುವುದು ತುಂಬ ಖುಷಿದಾಯಕವಾಗಿದೆ.

ಇದರಿಂದ ಇನ್ನಷ್ಟು ಸೇವೆಗೆ ಉತ್ಸುಕನಾಗಿದ್ದೇನೆ. ಇದೇ ತರನಾಗಿ ಇನ್ನೂ ಬಹಳಷ್ಟು ಜನರು ಎಲೆಮರೆ ಕಾಯಿಯಂತೆ ಸೇವೆ ಮಾಡುತ್ತಿದ್ದು, ಅಂತವರನ್ನು ಸಹ ಪ್ರಶಸ್ತಿ ನೀಡಲು ಮುಂದಾಗಬೇಕು ಎಂದರು. ಈ ಸಂದರ್ಭದಲ್ಲಿ ವಿದ್ಯಾರ್ಥಿ ಪರಿಷತ್ ರಾಜಾಧ್ಯಕ್ಷ ಸಾಗರ ಆರ್.ಕಲದಿಗಿ, ಸಾಹಿತ್ಯ ಕಲಾವಿದ ಡಾ.ಬಸವರಾಜ ಗವಿಮಠ ಸೇರಿದಂತೆ ಗಣ್ಯರಿದ್ದರು.

# ಜಾಲಹಳ್ಳಿಯಲ್ಲಿ ಅದ್ದೂರಿಯಾಗಿ ಮೊಹರಂ ಹಬ್ಬದ 7ನೇ ತಾರೀಕು ಆಚರಣೆ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿಯಲ್ಲಿ ನಡೆಯುವ ಮೊಹರಂ ಹಬ್ಬವು ಉತ್ತರ ಕರ್ನಾಟಕದ ಪ್ರಮುಖ ಮೊಹರಂ ಆಚ-ರಣೆಗಳಲ್ಲಿ ಒಂದಾಗಿದೆ. ಮುದಗಲ್ ನಂತರ ಉತ್ತರ ಕರ್ನಾಟಕದ ಎರಡನೇ ಅತಿ ದೊಡ್ಡ ಮೊಹರಂ ಆಚ-ರಣೆಯೆಂದು ಪರಿಗಣಿಸಲ್ಪಡುವ ಜಾಲಹಳ್ಳಿಗೆ ವಿವಿಧ ರಾಜ್ಯಗಳಿಂದ ಸಾವಿರಾರು ಭಕ್ತಾದಿಗಳು ಆಗಮಿಸುತ್ತಾರೆ.**

ಹಬ್ಬದ ಅಂಗವಾಗಿ 5ನೇ ತಾ-ರೀಖಿನಿಂದ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಆರಂಭಗೊಂಡಿದ್ದು, 7ನೇ ತಾರೀಕು (ಸಾತ್ ತಾರಿಕ್) ಕಾರ್ಯಕ್ರಮವನ್ನು ಭಕ್ತಿ, ಶ್ರದ್ಧೆ ಹಾಗೂ ಸಂಭ್ರಮದಿಂದ ಆಚರಿಸಲಾಯಿತು. ಊರಿನ ರಾಜವಂಶಸ್ಥರು ಹಾಗೂ ವತಂದಾರರ ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ಜಾತಿ-



ಧರ್ಮ ಭೇದವಿಲ್ಲದೆ ಎಲ್ಲ ಸಮುದಾಯಗಳ ಸಾರ್ವಜನಿಕರು ಭಾಗವಹಿಸಿ ಕೋಮು ಸೌಹಾರ್ದತೆಗೆ ಮಾದರಿಯಾದರು.

ಬೆಳಗಿನ ಜಾವ 3 ಗಂಟೆಗೆ ಹೈದರಾಲಿ ಹಾಗೂ ಇಮಾಮ್-ಎ-ಕಾಸಿಂ ಮೆರವಣಿಗೆಗಳು ಗ್ರಾಮದ ಪ್ರಮುಖ ಬೀದಿಗಳ ಮೂಲಕ ಸಂಚ-ರಿಸಿದವು. ಈ ಸಂದರ್ಭದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಯಾಸಿನ್ ಮುಲ್ಲಾ ಅವರು, ಆಶೀರ್ ಖಾನ್ ಮಸೀದಿಯಿಂದ ಆರಂಭವಾದ ಮೆರವಣಿಗೆಯು ಗ್ರಾಮದ ಪ್ರಮುಖ ಅಗಸಿಗಳ ಮೂಲಕ ಗರಿಗಲಿ ದರ್ಗಾಕ್ಕೆ ತೆರಳಿ ದರ್ಶನ ಪಡೆದ ಬಳಿಕ ಬೆಳಿಗ್ಗೆ 8 ಗಂಟೆಗೆ ಸಮಾಪ್ತಿಯಾಯಿತು ಎಂದು ತಿಳಿಸಿದರು.

**ಈ ಸಂದರ್ಭದಲ್ಲಿ ಮಾತನಾಡಿದ ಹುಸೇನ್ ಬಾಷಾ ಸರ್ನಾಬತ್ ಅವರು, ಮೊಹರಂ ಹಬ್ಬದ 9ನೇ ತಾರೀಖಿನ "ಕತ್ತಲ್ ರಾತ್ರಿ" ಕಾರ್ಯಕ್ರಮವು ಜೂನ್ 25ರಂದು ಗುರುವಾರ ರಾತ್ರಿ ನಡೆಯಲಿದ್ದು, ಇಮಾಮ್ ಹುಸೇನ್ ಹಾಗೂ ಸೈಯದ್ ಕಾಸಿಂ ಮೆರವಣಿಗೆಗಳು ಊರಿನ ರಾಜವಂಶಸ್ಥರು ಹಾಗೂ ವತಂದಾರರ ನೇತೃತ್ವದಲ್ಲಿ ನಡೆಯಲಿವೆ ಎಂದು ಹೇಳಿದರು.**

ಹಬ್ಬದ ಹಿನ್ನೆಲೆಯಲ್ಲಿ ಜಾಲಹಳ್ಳಿ ಪೊಲೀಸ್ ಠಾಣೆಯ ಪಿಎಸ್‌ಐ ವೈಶಾಲಿ ಜಳಕಿ ಅವರ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿದ್ದು, ಕಾರ್ಯಕ್ರಮಗಳು ಶಾಂತಿಯುತವಾಗಿ ಹಾಗೂ ಯಶಸ್ವಿಯಾಗಿ ನೆರವೇರಿದವು.

**ಹೈದರ್ ಸಾಬ್ ಉದ್ದಾರ್ ಅವರು ಮಾತನಾಡಿ, ಜೂನ್ 26ರಂದು ಮೊಹರಂ ಹಬ್ಬದ ಕೊನೆಯ ದಿನದ ಅಂಗವಾಗಿ ಆಶೀರ್ ಖಾನ್‌ನಿಂದ ಆರಂಭವಾಗುವ ಮೆರವಣಿಗೆಯು ಜಾಲಹಳ್ಳಿಯ ದೇಸಾಯಿ ಕುಟುಂಬದವರ ಮೈದಾನದಲ್ಲಿ ಸಮಾರೋಪಗೊಳ್ಳಲಿದ್ದು, ಅಂತಿಮ ಧಾರ್ಮಿಕ ವಿಧಿವಿಧಾನಗಳು ಅಲ್ಲಿ ನೆರವೇರಲಿವೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಊರಿನ ರಾಜವಂಶಸ್ಥರಾದ ರಾಜ ರಂಗಪ್ಪ ನಾಯಕ್ ಅವರ ನೇತೃತ್ವದಲ್ಲಿ ಎಲ್ಲಾ ವತಂದಾರರು, ಗಣ್ಯರು, ಗ್ರಾಮಸ್ಥರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾವಿರಾರು ಭಕ್ತರು ಭಾಗವಹಿಸಿದ್ದರು.**

## ಸಾಹಿತ್ಯ ಸಿಂಚನ

### ಹೋರಾಟ

ಬಿಡುವುದಿಲ್ಲ ನಾವು ಬಿಡುವುದಿಲ್ಲ
ಹೋರಾಟ ಎಂದು ಬಿಡುವುದಿಲ್ಲ
ಸತ್ಯ ಮಾರ್ಗದಲ್ಲಿ ನ್ಯಾಯ ಕೇಳುವಾಗ
ಸತ್ಯಾಗ್ರಹ ಕೈಬಿಡುವುದಿಲ್ಲ
ಇಲ್ಲಿಂದ, ಹಿಂದೆ ಸರಿಯುವ ಮಾತಿಲ್ಲ .
ಹಿಂದೆ ಸರಿಯುವ ಮಾತಿಲ್ಲ .

ಕೆಂಬಾವುಟವ ಕೈಲಿ ಹಿಡಿದ
ಕೆಚ್ಚೆದೆಯ ಗಂಡುಗಲಿಗಳು,
ಕಾಯಕವೇ ಕೈಲಾಸವೆನ್ನುವ
ಕಾರ್ಯನಿಷ್ಠೆಯ ಕಾರ್ಮಿಕರು.

ಬೆವರು ಸುರಿಸಿ ಧರಣಿಗೆ ನಾವು
ಚಿನ್ನದ ಬೆಳೆಯನು ತೆಗೆದವರು,
ರಕ್ತವನ್ನೇ ನೀರಾಗಿಸಿ ಇಲ್ಲಿ
ಭವ್ಯ ನಗರಿಯನು ಕಟ್ಟಿದವರು.

ನಮ್ಮ ಶ್ರಮದ ಶಕ್ತಿಯ ಮುಂದೆ
ಯಾವ ಅಧಿಕಾರವೂ ನಿಲ್ಲದು,
ನ್ಯಾಯದ ಧ್ವನಿಯ ಅಡಗಿಸಲು ಇಲ್ಲಿ
ಯಾರ ಕೈಯಲ್ಲೂ ಆಗದು!

"ಭಿಕ್ಷೆಯ ಬೇಡಲು ಬಂದವರಲ್ಲ ನಾವು,
ನಮ್ಮಯ ಹಕ್ಕನ್ನು ಕೇಳಲು ಬಂದೆವು.
ಬೆದರಿಕೆಯ ಬೆಂಕಿ ಉಗುಳಿದರೂ ಇಲ್ಲಿ,
ಬಗ್ಗುವ ಬೆದರುವ ಹೈಕಳು ನಾವಲ್ಲ!"

ಶ್ರಮಿಕನ ಹೊಟ್ಟೆಗೆ ಹೊಡೆಯಲು ಬಂದರೆ
ಸುಮ್ಮನೆ ಕೂರುವ ಕಾಲವದಲ್ಲ,
ಹಕ್ಕನ್ನು ತುಳಿದು ಆಳುವ ಆಸೆಗೆ
ಇನ್ನಿಲ್ಲಿ ಜಾಗ ಉಳಿದಿಲ್ಲ!

ಕೂಲಿ ಕೇಳಿದರೆ ಪ್ರಾಣವ ತೆಗೆಯುವ
ದರ್ಪದ ದಿನಗಳು ಮುಗಿದು ಹೋದವು,
ಕೋವಿ-ಲಾಠಿಯ ಬೆದರಿಕೆಗಳಿಗೆಲ್ಲಾ
ಬಗ್ಗುವ ದಿನಗಳು ಕಳೆದು ಹೋದವು.

ಕೋಟಿ ಕೋಟಿ ಲಾಭದ ಹಣದಲಿ
ನಮ್ಮ ಬೆವರಿನ ಹನಿಗಳು ಇವೆ,
ನಿಮ್ಮ ಅರಮನೆಯ ಭದ್ರ ಬುನಾದಿಗೆ
ನಮ್ಮ ಹೆಗಲುಗಳೇ ಆಸರೆಯಾಗಿವೆ.

ನಮ್ಮ ಹಕ್ಕು ಪಡೆಯುವವರೆಗೆ
ನಮ್ಮೀ ಪಯಣ ನಿಲ್ಲುವುದಿಲ್ಲ,
ಕ್ರಾಂತಿಯ ಗೀತೆಯ ಹಾಡುತ ಸಾಗುವ
ಹೆಜ್ಜೆಗಳು ಎಂದೂ ದಣಿಯುವುದಿಲ್ಲ!

**ಡಾ ಮಹೇಂದ್ರ ಕುರ್ಡಿ**

## 27 ವರ್ಷಗಳ ದಾಂಪತ್ಯ ಪಯಣ: ಸಮಾಜಸೇವೆಯಲ್ಲಿ ಮಾದರಿಯಾದ ಸುಜಾತ-ಚನ್ನಬಸಯ್ಯ ದಂಪತಿ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಪ್ರೀತಿ, ವಿಶ್ವಾಸ, ತ್ಯಾಗ, ಸಹಕಾರ ಹಾಗೂ ಮಾನವೀಯ ಮೌಲ್ಯಗಳನ್ನು ಜೀವನದ ಆಧಾರವಾಗಿಸಿಕೊಂಡು 27 ವರ್ಷಗಳ ದಾಂಪತ್ಯ ಜೀವನವನ್ನು ಯಶಸ್ವಿಯಾಗಿ ಪೂರೈಸಿರುವ ಆದರ್ಶ ದಂಪತಿಗಳಾದ ಶ್ರೀಮತಿ ಸುಜಾತ ಹಾಗೂ ಡಾ॥ ಚನ್ನಬಸಯ್ಯ ಸ್ವಾಮಿಯವರಿಗೆ ಅವರ 27ನೇ ವಿವಾಹ ವಾರ್ಷಿಕೋತ್ಸವದ ಅಂಗವಾಗಿ ವಿವಿಧ ವಲಯಗಳಿಂದ ಅಭಿನಂದನೆಗಳ ಮಹಾಪೂರ ಹರಿದುಬಂದಿದೆ.**

ಕುಟುಂಬದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸುತ್ತಾ ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಈ ದಂಪತಿ, ಸಿಂಧನೂರಿನ ಕಾರುಣ್ಯ ಆಶ್ರಮದ ಮೂಲಕ ಅನೇಕ ನಿರಾಶ್ರಿತರು, ಬಡವರು ಹಾಗೂ ಸಂಕಷ್ಟದಲ್ಲಿರುವ ಜನರ ಬದುಕಿಗೆ ಆಶಾಕಿರಣವಾಗಿದ್ದಾರೆ. ಆಶ್ರಯವಿಲ್ಲದವರಿಗೆ ಆಸರೆಯಾಗಿ, ನಿರ್ಗತಿಕರ ಕಣ್ಣೀರನ್ನು



ಒರೆಸುವ ಮೂಲಕ ಮಾನವೀಯ ಸೇವೆಯ ನೈಜ ರೂಪವನ್ನು ಸಮಾಜಕ್ಕೆ ಪರಿಚಯಿಸಿದ್ದಾರೆ. 27 ವರ್ಷಗಳ ದಾಂಪತ್ಯ ಜೀವನವು ಕೇವಲ ವರ್ಷಗಳ ಲೆಕ್ಕವಲ್ಲ; ಅದು ಪರಸ್ಪರ ಪ್ರೀತಿ, ಗೌರವ, ಸಹನೆ ಮತ್ತು ಅರ್ಥೈಸಿಕೊಳ್ಳುವಿಕೆಯ ಸುಂದರ ಸಂಕೇತವಾಗಿದೆ. ಕುಟುಂಬ ಮತ್ತು ಸಮಾಜದ ನಡುವೆ ಸಮತೋಲನ ಸಾಧಿಸಿ,



**ಶುಭ ಹಾರೈಕೆಯೊಂದಿಗೆ ಶ್ರೀ ಶಿವನಗೌಡ ಶಿಕ್ಷಕರು ಜಾಲಹಳ್ಳಿ ತಾ. ದೇವದುರ್ಗ ಜಿ. ರಾಯಚೂರು**

ಅನೇಕರ ಬದುಕಿಗೆ ಸ್ಫೂರ್ತಿಯಾಗಿರುವ ಇವರ ಸೇವಾ ಕಾರ್ಯಗಳು ಸಮಾಜದಲ್ಲಿ ವಿಶೇಷ ಗೌರವಕ್ಕೆ ಪಾತ್ರವಾಗಿವೆ. ದಂಪತಿಗಳ ಸೇವಾ ಮನೋಭಾವ, ಸರಳತೆ ಹಾಗೂ ಮಾನವೀಯ ಮೌಲ್ಯಗಳ ಪ್ರತಿಬದ್ಧತೆ ಯುವ ಪೀಳಿಗೆಗೆ ಮಾರ್ಗದರ್ಶಕವಾಗಿದೆ. ಸಮಾಜದ ಒಳಿತಿಗಾಗಿ ಅವರು ಕೈಗೊಂಡಿರುವ ಕಾರ್ಯಗಳು ಇನ್ನಷ್ಟು ವಿಸ್ತರಿಸಿ ಸಾವಿರಾರು ಜನರ ಬದುಕಿಗೆ ಬೆಳಕಾಗಲಿ ಎಂಬುದು ಸಾರ್ವಜನಿಕರ ಆಶಯವಾಗಿದೆ. ಈ ಶುಭ ಸಂದರ್ಭದಲ್ಲಿ ಪರಮಾತ್ಮನು ಅವರಿಗೆ ಉತ್ತಮ ಆರೋಗ್ಯ, ದೀರ್ಘಾಯುಷ್ಯ, ನೆಮ್ಮದಿ, ಸಂತೋಷ ಹಾಗೂ ಸಮೃದ್ಧಿಯನ್ನು ಕರುಣಿಸಲಿ. ಅವರ ದಾಂಪತ್ಯ ಜೀವನ ಇನ್ನಷ್ಟು ಸುಖಮಯವಾಗಲಿ ಹಾಗೂ ಸಮಾಜಸೇವೆಯ ಪಯಣ ಮತ್ತಷ್ಟು ಅರ್ಥಪೂರ್ಣವಾಗಲಿ ಎಂದು ಹಾರೈಸಲಾಗಿದೆ. "ನಿಮ್ಮ ಪ್ರೀತಿ ಕುಟುಂಬಕ್ಕೆ ಶಕ್ತಿ,ನಿಮ್ಮ ಸೇವೆ ಸಮಾಜಕ್ಕೆ ಸ್ಫೂರ್ತಿ,ನಿಮ್ಮ ಜೀವನ ಮಾನವೀಯತೆಗೆ ಮಾದರಿ." 27ನೇ ವಿವಾಹ ವಾರ್ಷಿಕೋತ್ಸವದ ಹಾರ್ದಿಕ ಶುಭಾಶಯಗಳು. ಶುಭ ಹಾರೈಕೆಗಳೊಂದಿಗೆ ಶಿವನಗೌಡ ಶಿಕ್ಷಕರು, ಜಾಲಹಳ್ಳಿ

## ಸೀಮಾ ಕೆ ಅವರಿಗೆ "ಫ್ಲಾರೆನ್ಸ್ ನೈಟಿಂಗೇಲ್" ಪ್ರಶಸ್ತಿ ಮಾರ್ನಿಂಗ್ ವಾಕಿಂಗ್ ಬಳಗದಿಂದ ಸನ್ಮಾನ



ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಸಿಂಧನೂರು ನಗರದ ಸರ್ಕಾರಿ ಆಸ್ಪತ್ರೆಯಲ್ಲಿ ನಿಸ್ವಾರ್ಥ ಸೇವೆ, ಕರ್ತವ್ಯ ನಿಷ್ಠೆ, ಹಾಗೂ ರೋಗಿಗಳ ಆರೈಕೆಯಲ್ಲಿ ನರ್ಸಿಂಗ್ ಆಫೀಸರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಸೀಮಾ ಕೆ, ಅವರ ಅತ್ಯುತ್ತಮ ಕಾರ್ಯಕ್ಷಮತೆಯನ್ನು ಗುರುತಿಸಿ, ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಭವ್ಯ ಸಮಾರಂಭದಲ್ಲಿ ಆರೋಗ್ಯ ಸಚಿವ ಯು.ಟಿ. ಖಾದರ್ ಅವರಿಂದ 2026ನೇ ಸಾಲಿನ ಪ್ರತಿಷ್ಠಿತವಾದ "ಫ್ಲಾರೆನ್ಸ್ ನೈಟಿಂಗೇಲ್" ಪ್ರಶಸ್ತಿಯನ್ನು ಸ್ವೀಕರಿಸಿ ಜಿಲ್ಲೆ, ತಾಲೂಕು, ಹಾಗೂ ಆರೋಗ್ಯ ಸಂಸ್ಥೆಗೆ ಗೌರವವನ್ನು ಹೆಚ್ಚಿಸಿದ್ದಾರೆ.**

ಈ ಪ್ರಶಸ್ತಿ ಪಡೆದ ಸೀಮಾ ಕೆ, ಅವರನ್ನು ಗುರುತಿಸಿ, ನಗರದ ಮಾರ್ನಿಂಗ್ ವಾಕಿಂಗ್ ಬಳಗದ ಎಲ್ಲಾ ಸದಸ್ಯರು ಜೂ.24 ಬುಧವಾರದಂದು ಬೆಳಿಗ್ಗೆ ಕ್ರೀಡಾಂಗಣದಲ್ಲಿ ಸನ್ಮಾನಿಸಿ ಗೌರವಿಸಿದರು. ನಂತರ ಮಾತನಾಡಿದ ಸೀಮಾ ಕೆ ಅವರು, ದೇಶದ ಎಲ್ಲಾ ರಾಜ್ಯಗಳಲ್ಲಿ ಆರೋಗ್ಯ ಸೇವೆಯಲ್ಲಿ ಉತ್ತಮ ಕಾರ್ಯ ಹಾಗೂ ಗುರುತರವಾದ ಸೇವೆಯಲ್ಲಿ ಛಾಪನ್ನು ಮೂಡಿಸಿ ಆರೋಗ್ಯ ಸಂಸ್ಥೆ ಹಾಗೂ ಸರ್ಕಾರದ ಗಮನ ಸೆಳೆದಾಗ ಅಂತಹವರನ್ನು ಗುರುತಿಸಿ, ನಮ್ಮಂತಹ ನರ್ಸಿಂಗ್ ಆಫೀಸರ್ಸ್ ಗೆ ಒಂದು ಅತ್ಯುತ್ತಮ ಪ್ರಶಸ್ತಿ ಕೊಡುವುದು ವಾಡಿಕೆಯಾಗಿದೆ. ಅದು "ಫ್ಲಾರೆನ್ಸ್ ನೈಟಿಂಗೇಲ್" ಎಂಬ ಅತ್ಯುತ್ತಮ ಪ್ರಶಸ್ತಿಯನ್ನು ಕೊಟ್ಟು ಗೌರವಿಸುತ್ತದೆ. ಈ ಪ್ರಶಸ್ತಿ ಪಡದಿದ್ದು ವೈಯಕ್ತಿಕವಾಗಿ ನನಗೆ ಹಾಗೂ ನನ್ನ ಕುಟುಂಬಕ್ಕೆ ಬಹಳ ಸಂತೋಷ ತರಿಸಿದೆ, ಜವಾಬ್ದಾರಿಯನ್ನು ಕೂಡ ಹೆಚ್ಚಿಸಿದೆ. ಹಾಗೂ ಸಿಂಧನೂರಿನ ಮಾರ್ನಿಂಗ್ ವಾಕಿಂಗ್ ಬಳಗದ ಎಲ್ಲಾ ಪ್ರತಿಯೊಬ್ಬ ಸದಸ್ಯರಿಗೂ ನನ್ನನ್ನು ಪ್ರೀತಿಯಿಂದ ಆತ್ಮೀಯವಾಗಿ ಕರೆದು ಸ್ವಾಗತಿಸಿ ಸನ್ಮಾನಿಸಿ ಗೌರವಿಸಿ ಪ್ರೋತ್ಸಾಹಿಸಿದ್ದಕ್ಕಾಗಿ ಎಲ್ಲರಿಗೂ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸುತ್ತೇನೆ ಎಂದರು.

ಈ ಸಂದರ್ಭದಲ್ಲಿ: ಫಕೀರಪ್ಪ ತಿಡಿಗೋಳ, ಅಯ್ಯಪ್ಪ ಟಿ.ಎನ್, ಉಮೇಶ್ ಪಾಟೀಲ್, ಮಲ್ಲಪ್ಪ ಮೈಲಾರ್, ವಿರುಪಯ್ಯಸ್ವಾಮಿ, ರಾಮಯ್ಯ ಬಾದರ್ಲಿ, ಕಾಸಪ ಅಧ್ಯಕ್ಷ ಎಚ್.ಎಫ್.ಮಸ್ಕಿ, ಅಮರೇಶ ಮಿಟ್ಟಿಮನಿ, ಶಿವಪುತ್ರಪ್ಪ ಕಾನಿಹಾಳ, ಮಲ್ಲಿಕಾರ್ಜುನ ಮಟ್ಟೂರು, ಚಂದ್ರಶೇಖರ ಕಗ್ಗೋಡ್, ಜಿ.ಎಮ್.ಪಡ್ನಾಡ್, ಬಸವರಾಜ ಮಲ್ಲಾಪುರ, ಪಂಪಾಪತಿ ಬಳಗಾನೂರ, ಬಸವರಾಜ ಇಂಜಿನಿಯರ್, ಮೌನೇಶ ಪತ್ತಾರ್ ಬಳಗಾನೂರ, ದೊಡ್ಡಬಸವನಗೌಡ ಕೆ, ಲಿಂಗನಗೌಡ, ಸೇರಿದಂತೆ ಅನೇಕರಿದ್ದರು.

## ಕಲ್ಯಾಣ ಕರ್ನಾಟಕ ಭಾಗದ ಮೂಲಭೂತ ಸೌಲಭ್ಯಕ್ಕೆ ಒತ್ತು ಕೊಡಲು ರೈತ ಸಂಘಟನೆ ಸರ್ಕಾರಕ್ಕೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಟಿಬಿ ಡ್ಯಾಂನ 33 ಕ್ರಸ್ಟ್ ಗೇಟ್ ಗಳನ್ನು ಕೂಡಿಸಿ ಏನು ಒಂದು ಹೊಸ ಡ್ಯಾಂನ್ನೇ ಸೃಷ್ಟಿಸಿದ್ದೇವೆ ಎಂದು ಬೀಗಿ ಉದ್ಘಾಟನೆ ಮಾಡುತ್ತಿರುವ ರಾಜ್ಯ ಸರ್ಕಾರ ಮೊದಲು 33 ಟಿಎಂಸಿ ಹೂಳು ತುಂಬಿ 15 ವರ್ಷಗಳೇ ಕಳೆದರೂ ಕೂಡ ಇಲ್ಲಿಯವರೆಗೂ ಯಾವ ಸರ್ಕಾರವು ಪರಿಹಾರ ಕಂಡುಕೊಳ್ಳದೆ, ಈ ಭಾಗದ ಅಭಿವೃದ್ಧಿ ಕಡೆಗಣಿಸುತ್ತಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಬಸವರಾಜ ಗೋಡಿಹಾಳ ಸರ್ಕಾರಗಳ ವಿರುದ್ಧ ವಾಗ್ದಾಳಿ ನಡೆಸಿದರು.**

ನಗರದ ಪತ್ರಿಕಾ ಭವನದಲ್ಲಿ ಜೂ.24 ಬುಧವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ 65 ಕೋಟಿ ವೆಚ್ಚದಲ್ಲಿ ಟಿಬಿ ಡ್ಯಾಂನ ಕ್ರಸ್ಟ್ ಗೇಟಗಳನ್ನು ಬದಲಾವಣೆ ಮಾಡಿದ್ದೆ ದೊಡ್ಡ ಸಾಧನೆ ಎಂಬಂತೆ ಬೀಗುತ್ತಿರುವುದು ನಾಚಿಕೆಗೇಡಿನ ಸಂಗತಿ. ಈ ಭಾಗದ ಗ್ರಾಮೀಣ ರಸ್ತೆ, ಕುಡಿಯುವ ನೀರು, ಹೀಗೆ ನೂರಾರು ಸಮಸ್ಯೆಗಳಿಗೆ ಪರಿಹಾರ ಇಲ್ಲದಿರುವುದು ನೋಡಿದರೆ, ಆಳುವ ಸರ್ಕಾರದ





ಶಾಸಕರು, ಸಂಸದರು, ಸಚಿವರಿಗೆ ಅಭಿವೃದ್ಧಿ ಮಾಡುವ ಇಚ್ಛಾಶಕ್ತಿ ಇಲ್ಲವೆಂದು ಕಾಣುತ್ತಿದೆ.

ಜೂ.25 ಶುಕ್ರವಾರದಂದು ಕರ್ನಾಟಕ, ಆಂದ್ರಪ್ರದೇಶ, ತೆಲಂಗಾಣದ 3 ರಾಜ್ಯದ ಮುಖ್ಯಮಂತ್ರಿಗಳು ಹಾಗೂ ನೀರಾವರಿ ಸಚಿವರು, ಸಂಸದರು, ಶಾಸಕರು, ಆಗಮಿಸಿ ಕ್ರಸ್ಟ್ ಗೇಟ್ ಗಳನ್ನು ಉದ್ಘಾಟನೆ ಮಾಡಲಿದ್ದಾರೆ. ಬಳ್ಳಾರಿ, ಕೊಪ್ಪಳ, ವಿಜಯನಗರ, ರಾಯಚೂರು, 4 ಜಿಲ್ಲೆಯ ರೈತರಿಗೆ ಅನೇಕ ಬಾರಿ ಎರಡನೇ ಬೆಳೆಗೆ ನೀರಿಲ್ಲದೆ ಕೆಳಭಾಗದ ರೈತರಿಗೆ ನೀರು ಮುಟ್ಟದೆ ಸರಿಯಾಗಿ ಕೃಷಿ ಮಾಡಲು ಸಾಧ್ಯವಾಗದೆ, ರೈತರು ಆಂದ್ರಪ್ರದೇಶ, ಬೆಂಗಳೂರು, ಮಂಗಳೂರು, ಕಡೆಗೆ ದುಡಿಯಲು ಗುಳೆ ಹೋಗುತ್ತಿದ್ದಾರೆ. ಜಲಾಶಯಕ್ಕೆ ಕಾರ್ಖಾನೆಯ ಕಲುಷಿತ ನೀರು ಬಿಡುವುದನ್ನು ತಡೆಗಟ್ಟಬೇಕು. ಅನಧಿಕೃತವಾಗಿ ಕಾರ್ಖಾನೆಗಳು ನೀರು ಬಳಕೆ ಮಾಡಿಕೊಳ್ಳುವುದು ತಡೆಯಬೇಕು ಎಂದು ಜೂ.25 ಶುಕ್ರವಾರ 3 ರಾಜ್ಯದ ಮುಖ್ಯಮಂತ್ರಿಗಳು ಆಗಮಿಸುವ ಹಿನ್ನೆಲೆ ಒತ್ತಾಯ ಮಾಡಿ, ಈ ಭಾಗದ ರೈತರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕು. ಇಲ್ಲದೆ ಹೋದರೆ ಪ್ರತ್ಯೇಕ ರಾಜ್ಯದ ಹೋರಾಟಕ್ಕೆ ಮುಂದಾಗಬೇಕಾಗುತ್ತದೆಂದು ಎಚ್ಚರಿಸಿ ಜಲಾಶಯದಲ್ಲಿ ತುಂಬಿರುವ 33 ಟಿಎಂಸಿ ಹೂಳನ್ನು ತೆಗೆಯಬೇಕು, ಅದು ಸಾಧ್ಯವಾಗದಿದ್ದರೆ ನವಲಿ ಸಮಾನಾಂತರ ಜಲಾಶಯವನ್ನು ನಿರ್ಮಾಣ ಮಾಡಬೇಕು. ಇವೆರಡನ್ನೂ ಮಾಡಲಾಗದಿದ್ದರೆ, ನಮ್ಮ ಕಲ್ಯಾಣ ಕರ್ನಾಟಕವನ್ನು ಪ್ರತ್ಯೇಕ ರಾಜ್ಯವನ್ನಾಗಿ ಮಾಡಿ ಎಂದು ರಾಜ್ಯ ಸರ್ಕಾರಕ್ಕೆ ಆಗ್ರಹಿಸಿದರು.

ಈ ಸಂದರ್ಭದಲ್ಲಿ: ತಾಲೂಕು ಉಪಾಧ್ಯಕ್ಷ ಯಮನಪ್ಪ ಪಗಡದಿನ್ನಿ, ರಾಜುನಾಯಕ ಪುಲದಿನ್ನಿ, ರಾಜಪ್ಪ ಕುಂಬಾರ, ತಾಲೂಕು ಕಾರ್ಯಾಧ್ಯಕ್ಷ ನಿರುಪಾದೆಪ್ಪ ಅಡ್ಡಿ, ತಾಲೂಕು ಅಧ್ಯಕ್ಷ ನಾಗರಾಜ ಬಿಂಗಿ, ತಾಲೂಕು ಕಾರ್ಯದರ್ಶಿ ಶಿವಪ್ಪ ಬೆಳಗುರ್ಕಿ, ನಗರ ಘಟಕದ ಉಪಾಧ್ಯಕ್ಷ ಬಸವರಾಜ ವಿಶ್ವಕರ್ಮ, ನಗರ ಘಟಕದ ಅಧ್ಯಕ್ಷ ರವಿಕುಮಾರ ಇ.ಜೆ. ಬಸ್ಸಾಪುರ, ಸೇರಿದಂತೆ ಅನೇಕರಿದ್ದರು.

## ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಹರನಾಳ ಗ್ರಾಮದಲ್ಲಿ ಗ್ರಾಮಸ್ಥರಿಗೆ ಕುಡಿಯುವ ನೀರಿನ ತೀವ್ರ ಸಮಸ್ಯೆ ಉದ್ಭವಿಸಿದ್ದು ಇದನ್ನು ತುರ್ತಾಗಿ ಪರಿಹರಿಸುವಂತೆ ಆಗ್ರಹಿಸಿ ಕರ್ನಾಟಕ ಭೀಮರಾಜ ಸೇನೆ ರಾಜ್ಯಾಧ್ಯಕ್ಷ ಶಿವು ನಾಟೀಕಾರ ನೇತೃತ್ವದಲ್ಲಿ ಹರನಾಳ ಗ್ರಾಮಸ್ಥರು ವಿಜಯಪುರ ಜಿಲ್ಲಾಧಿಕಾರಿಗಳಿಗೆ ಸೋಮವಾರ ಮನವಿಅಸಲ್ಲಿಸಿದರು.**





ಮನವಿ ಪತ್ರದಲ್ಲಿ ತಾಳಿಕೋಟಿ ತಾಲೂಕಿನ ಹರನಾಳ ಗ್ರಾಮದಲ್ಲಿ ಕಳೆದ ಕೆಲವು ತಿಂಗಳುಗಳಿಂದ ಕುಡಿಯುವ ನೀರಿಗೆ ಉಂಟಾಗಿ ಜನರು ಸಾಕಷ್ಟು ಆರೋಗ್ಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಗ್ರಾಮದಲ್ಲಿರುವ ಬೋರ್ವೆಲ್ ಕೆಲಸ ಮಾಡದೆ ಸ್ಥಗಿತವಾಗಿದ್ದು ಕುಡಿಯುವ ನೀರಿಗೆ ಯಾವುದೇ ಮೂಲ ಇರುವುದಿಲ್ಲ. ಈ ಕುರಿತು ಗ್ರಾಮ ಪಂಚಾಯತ, ತಹಸಿಲ್ದಾರ್, ತಾಲೂಕ ಪಂಚಾಯತ್ ಇಒ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ಹಲವಾರು ಬಾರಿ ಮನವಿ ಮಾಡಿಕೊಂಡರು ಯಾವುದೇ ರೀತಿಯ ಶಾಶ್ವತ ಪರಿಹಾರ ಇಲ್ಲಿಯವರೆಗೆ ಮಾಡಿಲ್ಲ. ಕನಿಷ್ಠ ಗ್ರಾಮಸ್ಥರಿಗೆ ಟ್ಯಾಂಕರ್ ಗಳ ಮೂಲಕ ಆದರೂ ಕುಡಿಯುವ ನೀರು ಪೂರೈಸಬೇಕೆಂಬುದು ನಮ್ಮ ಬೇಡಿಕೆಯಾಗಿದೆ. ಇದರ ಕುರಿತು ಮಾನ್ಯ ಜಿಲ್ಲಾಧಿಕಾರಿಗಳು ಸಂಬಂಧಿಸಿದ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆಯನ್ನು ಕೊಡಬೇಕು ಮತ್ತು ಇದು ಆದಷ್ಟು ಬೇಗ ಕಾರ್ಯರೂಪದಲ್ಲಿ ಬರಬೇಕು ಇಲ್ಲದೆ ಹೋದಲ್ಲಿ ಇದಕ್ಕಿಂತಲೂ ಉಗ್ರವಾದ ಹೋರಾಟವನ್ನು ನಡೆಸುವುದು ಅನಿವಾರ್ಯವಾಗುತ್ತದೆ ಎಂದು ತಿಳಿಸಲಾಗಿದೆ.ಈ ಸಮಯದಲ್ಲಿ ಹರನಾಳ ಗ್ರಾಮಸ್ಥರಾದ ನಿಂಗಪ್ಪ ಬಿರಾದಾರ, ಸಿದ್ದು ತುಂಬಗಿ, ದೇವಪ್ಪ ಬಿರಾದಾರ, ಪರಸಪ್ಪ ಚಲವಾದಿ, ದೇವಪ್ಪ ಬೊಮ್ಮನಹಳ್ಳಿ ಹನುಮಂತ್ರಾಯ ಗುಡುಗುಂಟಿ, ಮಾಳಪ್ಪ ಚಳ್ಳಗಿ, ಬೀರಪ್ಪ ಬೆನಕನಹಳ್ಳಿ, ದೇವಪ್ಪ ಅಂಬಳನೂರ, ಸಯ್ಯದ ನದಾಫ, ರೇವಣಸಿದ್ದಪ್ಪ ಗಡ್ಡಿ, ಚಂದಪ್ಪ ಚಳ್ಳಗಿ, ಪರಸಪ್ಪ ನಾಗೂರ, ಮೌನೇಶ್. ಪೂಜಾರಿ, ಜಗದೀಶ ಬಿರಾದಾರ, ಮಾದಪ್ಪ ಶಿವಪ್ಪ ಬಿರಾದಾರ್ ಗಂಗಾಧರ ಬಿರಾದಾರ, ಗ್ಯಾನಪ್ಪ ಬಿರಾದಾರ, ಪರಶುರಾಮ ಎಡಹಳ್ಳಿ ಇದ್ದರು.

## ಆರ್‌ಎಸ್‌ಎಸ್ ನೋಂದಣಿ ದಾಖಲೆ ತೋರಿಸಲಿ

ನೈಜ್ಯ ದೆಸೆ ನ್ಯೂಸ್

**ಆರ್‌ಎಸ್‌ಎಸ್ ನೋಂದಣಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ತೋರಿಸಲಿ ಎಂದು ಗೃಹ ಸಚಿವ ಪ್ರಿಯಾಂಕ ಖರ್ಗೆ ಹೇಳಿದರು. ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಬೆಂಗಳೂರಿಗೆ ಬರುತ್ತಿದ್ದಾರೆ ಎಂಬ ಮಾಹಿತಿ ಇದೆ. ಅವರು ಆರ್‌ಎಸ್‌ಎಸ್‌ನ ನೋಂದಣಿ ದಾಖಲೆ ತರುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ ಎಂದು ಅವರು ಹೇಳಿದರು.**

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್‌ಗೆ ನಾನು



ನೋಂದಣಿಗೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಮೊದಲು ಉತ್ತರ ಕೊಡಲಿ. ನೋಂದಣಿ ದಾಖಲೆ ತೋರಿಸಲಿ ಎಂದು ಹೇಳಿದರು. ಆರ್‌ಎಸ್‌ಎಸ್‌ನ ಆದಾಯ ಕೇಳಿದಕ್ಕೆ ನನ್ನ ಮೇಲೆ ಬಿಜೆಪಿ ನಾಯಕರು ಟೀಕೆಗಳನ್ನು ಮಾಡುತ್ತಿದ್ದಾರೆ. ಆರ್‌ಎಸ್‌ಎಸ್ ಆದಾಯ ಕೇಳಿದರೆ ಇವರಿಗೆ ಏಕೆ ಉರಿ ಎಂದು ಪ್ರಶ್ನಿಸಿದ ಅವರು, ಆರ್‌ಎಸ್‌ಎಸ್ ಬಗ್ಗೆ ಕೇಳಿದರೆ ನಮ್ಮ ಕುಟುಂಬದ ಬಗ್ಗೆ ವೈಯುಕ್ತಿಕವಾಗಿ ಮಾತನಾಡುತ್ತಾರೆ ಎಂದು ಬಿಜೆಪಿ ನಾಯಕರ ವಿರುದ್ಧ ಕಿಡಿಕಾರಿದರು.

ಕೇಂದ್ರ ಸಚಿವೆ ಶೋಭ ಕರಂದ್ಲಾಜೆ ಅವರು ಪ್ರಿಯಾಂಕ ಖರ್ಗೆ ಬಲಿತ ದಲಿತ ಎಂದು ಹೇಳಿದ್ದಾರೆ. ಎಷ್ಟು ಜನ ಬಲಿತರು ಇದ್ದಾರೆ ಎಂಬುದನ್ನು ತೋರಿಸಲಿ ಎಂದು ಸವಾಲು ಹಾಕಿದರು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪ್ರಿಯಾಂಕ ಖರ್ಗೆ ಸೂಟ್ ಹಾಕಿಕೊಂಡು ವಿಧಾನಸೌಧದಲ್ಲಿ ಕುಳಿತಿರುತ್ತಾರೆ ಎಂದು ಅಪಪ್ರಚಾರ ಮಾಡಿದರು. ಏಕೆ, ನಾನು ಸೂಟ್ ಹಾಕಬಾರದ ಎಂದು ಅವರು ಪ್ರಶ್ನಿಸಿದರು. ಕಳೆದ ಅಧಿವೇಶನದಲ್ಲಿ ಬಿಜೆಪಿಯ ಸುನೀಲ್‌ಕುಮಾರ್ ಫೈಲ್ಸ್ ಬಂದ ಹಾಗೆ ಪ್ರಿಯಾಂಕ ಖರ್ಗೆ ಮಾತನಾಡುತ್ತಾರೆ. ಒಂದು ಲೋಟ ಹಾಲು ಹೆಚ್ಚು ಕುಡಿದಿದ್ದಾರೆ, ಅದಕ್ಕೆ ಪ್ರಿಯಾಂಕ ಖರ್ಗೆಗೆ ಜ್ಞಾನ ಹೆಚ್ಚು ಎಂದೆಲ್ಲಾ ಮಾತನಾಡಿದ್ದರು. ಒಬ್ಬ ದಲಿತ ಆರ್‌ಎಸ್‌ಎಸ್ ಬಗ್ಗೆ ಪ್ರಶ್ನೆ ಮಾಡಬಾರದು ಎನ್ನುವುದು ಈ ಬಿಜೆಪಿ ನಾಯಕರ ಉದ್ದೇಶ ಎಂದು ಪ್ರಿಯಾಂಕ್ ಕಿಡಿಕಾರಿದರು.

## ಕಂಪ್ಲಿಯಲ್ಲಿ ಸಂಭ್ರಮದ ಗಂಗಾದೇವಿ ಜಯಂತ್ಯೋತ್ಸವ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ಗಂಗಾಮತ ಸಮಾಜವೂ ಶಿಕ್ಷಣ ಸೇರಿದಂತೆ ನಾನಾ ರಂಗದಲ್ಲಿ ಹಿಂದುಳಿದ್ದು, ಕೂಡಲೇ ಕೇಂದ್ರ ಮತ್ತು ರಾಜ್ಯ ಸರ್ಕಾರ ಗಂಗಾಮತಸ್ಥರ ಕಡೆಗೆ ಹೆಚ್ಚಿನ ಗಮನ ಹರಿಸಿ, ಗಂಗಾಮತಸ್ಥರನ್ನು ಪರಿಶಿಷ್ಟ ಪಂಗಡ(ಎಸ್.ಟಿ)ಕ್ಕೆ ಸೇರಿಸಬೇಕೆಂದು ಕಂಪ್ಲಿ ತಾಲೂಕು ಗಂಗಾಮತ ಸಮಾಜದ ಅಧ್ಯಕ್ಷ ಎಲೆಗಾರ ನಾಗರಾಜ ಒತ್ತಾಯಿಸಿದರು.**

ಪಟ್ಟಣದಲ್ಲಿರು ಗಂಗಾಮತ ಸಮಾಜದ ಸಮುದಾಯ ಭವನದಲ್ಲಿ ಬುಧವಾರ ಗಂಗಾಮತ ಸಮಾಜದ ವತಿಯಿಂದ ಹಮ್ಮಿಕೊಂಡಿದ್ದ ಸಂಭ್ರಮದ ಗಂಗಾದೇವಿ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಸಮಾಜವು ಹಿಂದುಳಿದೆ. ಮತ್ತು ಸರ್ಕಾರದ ಸೌಲಭ್ಯಗಳು ಅಷ್ಟಕಷ್ಟೇ ಎಂಬಂತಿದೆ ಆದ್ದರಿಂದ ಎಸ್.ಟಿ ಮೀಸಲಾತಿ ನೀಡಿದರೆ, ಸಮಾಜದ ಅಭಿವೃದ್ಧಿ ಸಾಧ್ಯ. ಪ್ರತಿ ವರ್ಷದಂತೆ ಈ



ವರ್ಷವೂ ಕೂಡ ಗಂಗಾಮಾತೆಯ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಗಂಗಾಮತ ಸಮಾಜದವರು ಮಕ್ಕಳಿಗೆ ತಪ್ಪದೇ ಶಿಕ್ಷಣ ಮತ್ತು ಉತ್ತಮ ಸಂಸ್ಕಾರ ನೀಡಿದಾಗ ಮಾತ್ರ ಸಮಾಜ ಅಭಿವೃದ್ಧಿಯೊಂದಿಗೆ ಬದವಾಣೆ ಹೊಂದಲು ಸಾಧ್ಯ ಎಂದರು.

ಮೊದಲಿಗೆ ತುಂಗಭದ್ರ ನದಿ ತಟದಲ್ಲಿರುವ ಆರಾಧ್ಯ ದೇವತೆ ಗಂಗಾದೇವಿ ದೇವಸ್ಥಾನದಲ್ಲಿ ಮಹಾಮಂಗಳಾರತಿ ಸೇರಿದಂತೆ ವಿಶೇಷ ಪೂಜೆ ಸಲ್ಲಿಸಲಾಯಿತು. ನಂತರ ಇಲ್ಲಿನ ಸಮುದಾಯ ಭವನದಲ್ಲಿರುವ ಗಂಗಾದೇವಿ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಜಯಂತ್ಯೋತ್ಸವ ವಿಜೃಂಭಣೆಯಿಂದ ಆಚರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಕರೇಕಲ್ ಪ್ರಕಾಶ್, ಬಿ.ಸಿದ್ದಪ್ಪ, ಕರೇಕಲ್ ಮನೋಹರ್, ಈರಪ್ಪ, ಬಿ.ಈರಪ್ಪ, ಕೆ.ಬಿ.ವೀರಭದ್ರಪ್ಪ, ಯು.ವಿರುಪಣ್ಣ, ಬಿ. ರಮೇಶ, ನಡವಿ ಮಲ್ಲಿಕಾರ್ಜುನ, ಟಿ.ಮಲ್ಲಿಕಾರ್ಜುನ, ಟಿ.ಗಂಗಣ್ಣ, ಅಯೋದಿ ರಮೇಶ್, ಇಟಗಿ ವಿರುಪಾಕ್ಷಿ, ಡಿ.ರಮೇಶ್, ಸಣ್ಣಪ್ಪ, ವೀರೇಶ್, ಎಸ್.ಸುರೇಶ್, ಸುಣಗಾರ ಮಹೇಶ್, ಇಟಗಿ ಈರಣ್ಣ, ಅಯೋದಿ ವೆಂಕಟೇಶ್, ಆನೆಗುಂದಿ ತಾಯಣ್ಣ, ಜಂಗಾ ವೀರೇಶ್, ಬಸವರಾಜ, ಮಂಜುನಾಥ್, ಜಿ.ಯಲ್ಲಪ್ಪ, ಅರವಿಂದ, ಬೆಂಕೆಪ್ಪ, ಶರಣ, ಪರಶಪ್ಪ, ಮಲ್ಲಯ್ಯ ಸೇರಿದಂತೆ ಸಮಾಜದವರು ಉಪಸ್ಥಿತರಿದ್ದರು.

# ನೇಮಕಾತಿ ಪ್ರಕಟಣೆ

**KSP ನೇಮಕಾತಿ 2026 – 1600 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (CAR/DAR) ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಜೂನ್ 22, 2026**

KSP ನೇಮಕಾತಿ 2026: 1600 ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (CAR/DAR) ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಕರ್ನಾಟಕ ರಾಜ್ಯ ಪೊಲೀಸರು ಜೂನ್ 2026 ರ ಏಋಕ ಅಧಿಕೃತ ಅಧಿಸೂಚನೆಯ ಮೂಲಕ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ (CAR/DAR) ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 22-ಜುಲೈ-2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 22-06-2026

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 22-ಜುಲೈ-2026

ಅರ್ಜಿ ಶುಲ್ಕವನ್ನು ಪಾವತಿಸಲು ಕೊನೆಯ ದಿನಾಂಕ: 24-07-2026

ಪರೀಕ್ಷಾ ದಿನಾಂಕ: 06ನೇ-ಸೆಪ್ಟೆಂಬರ್-2026

ಅಧಿಕೃತ ವೆಬ್‌ಸೈಟ್: ksp.karnataka.gov.in

## ಮುಸ್ಲಿಂ ಸಮುದಾಯದ ನಾಯಕರಿಗೆ ಸಚಿವ ಸ್ಥಾನ ನೀಡಿ: ಕಾಂಗ್ರೆಸ್ ಹೈಕಮಾಂಡ್‌ಗೆ ಸೈಯದ್ ಹುಸೇನ್ ಮನವಿ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ರಾಜ್ಯ ಸಚಿವ ಸಂಪುಟ ವಿಸ್ತರಣೆ ವೇಳೆ ಮುಸ್ಲಿಂ ಸಮುದಾಯಕ್ಕೆ ಸಮರ್ಪಕ ಪ್ರಾತಿನಿಧ್ಯ ಕಲ್ಪಿಸಿ, ಪ್ರಭಾವಿ ನಾಯಕರಾದ ಶಾಸಕ ತನ್ವೀರ್ ಸೇಠ್ ಮತ್ತು ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ಅವರಿಗೆ ಸಚಿವ ಸ್ಥಾನ ನೀಡಬೇಕೆಂದು ಕಾಂಗ್ರೆಸ್ ಹೈಕಮಾಂಡ್ ಹಾಗೂ ರಾಜ್ಯ ನಾಯಕರಿಗೆ ಕಾಂಗ್ರೆಸ್ ಮುಖಂಡ ಸೈಯದ್ ಹುಸೇನ್ ಮನವಿ ಮಾಡಿದರು.**

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಬುಧವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ ತರುವಲ್ಲಿ ಮುಸ್ಲಿಂ ಸಮುದಾಯ ಸೇರಿದಂತೆ ಎಲ್ಲಾ ವರ್ಗದ ಮತದಾರರು ಮತ್ತು ಕಾರ್ಯಕರ್ತರು ಮಹತ್ವದ ಪಾತ್ರ ವಹಿಸಿದ್ದಾರೆ. ಕೋಮುವಾದಿ ಬಿಜೆಪಿಯನ್ನು ಅಧಿಕಾರದಿಂದ ದೂರವಿಡುವ ಉದ್ದೇಶದಿಂದ ಸಮುದಾಯ ಒಗ್ಗಟ್ಟಿನಿಂದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದು, ಆ ಕೊಡುಗೆಯನ್ನು ಪಕ್ಷದ ವರಿಷ್ಠರು ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಸಚಿವ ಸಂಪುಟ ವಿಸ್ತರಣೆ ಸಂದರ್ಭದಲ್ಲಿ ತನ್ವೀರ್ ಸೇಠ್, ಸಲೀಂ ಅಹ್ಮದ್ ಹಾಗೂ ರಿಜ್ವಾನ್



ಅರ್ಷದ್ ಅವರಿಗೆ ಅವಕಾಶ ನೀಡುವ ಮೂಲಕ ಸಮುದಾಯದ ಆಶೋತ್ತರಗಳಿಗೆ ಸ್ಪಂದಿಸಬೇಕು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹಾಗೂ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರು ಈ ಬೇಡಿಕೆಯನ್ನು ಈಡೇರಿಸಬೇಕೆಂದು ಒತ್ತಾಯಿಸಿದರು.

ಜಿಲ್ಲೆಗೂ ಸಚಿವ ಸ್ಥಾನ ನೀಡುವಂತೆ ಆಗ್ರಹ: ರಾಯಚೂರು ಜಿಲ್ಲೆಯ ಜನಪ್ರತಿನಿಧಿಗಳಿಗೂ ರಾಜ್ಯ ಸಚಿವ ಸಂಪುಟದಲ್ಲಿ ಅವಕಾಶ ನೀಡಬೇಕು ಎಂಬ ಕೂಗು ಜೋರಾಗಿದೆ ಎಂದು ಸೈಯದ್ ಹುಸೇನ್ ಹೇಳಿದರು. ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಸರ್ಕಾರದ ಅವಧಿಯಲ್ಲಿ ಅಮರೇಗೌಡ ಬಯ್ಯಾಪುರ ಅವರು ಸಚಿವರಾಗಿದ್ದರು. ಅದಾದ ಬಳಿಕ 2013ರ ಕಾಂಗ್ರೆಸ್ ಸರ್ಕಾರ, 2018ರ ಸಮ್ಮಿಶ್ರ ಸರ್ಕಾರ ಹಾಗೂ 2023ರ ಕಾಂಗ್ರೆಸ್ ಸರ್ಕಾರ ರಚನೆಯಾದಾಗಲೂ ಜಿಲ್ಲೆಗೆ ಸಚಿವ ಸ್ಥಾನ ದೊರೆತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ಶಾಸಕರಲ್ಲದಿದ್ದರೂ ತಮ್ಮ ಪ್ರಭಾವ, ಪಕ್ಷನಿಷ್ಠೆ ಹಾಗೂ ಅಭಿವೃದ್ಧಿ ಕಾರ್ಯಗಳ ಮೂಲಕ ಹೈಕಮಾಂಡ್‌ನ ಮೆಚ್ಚುಗೆ ಪಡೆದಿರುವ ಎನ್.ಎಸ್. ಬೋಸರಾಜು ಅವರಿಗೆ ಸಚಿವ ಸ್ಥಾನ ನೀಡಿರುವುದನ್ನು ಸ್ವಾಗತಿಸುತ್ತೇವೆ. ಅದೇ ರೀತಿಯಲ್ಲಿ ರಾಯಚೂರು ಜಿಲ್ಲೆಯ ಅರ್ಹ ಜನಪ್ರತಿನಿಧಿಗಳಿಗೂ ಸಚಿವ ಸ್ಥಾನ ನೀಡುವ ಮೂಲಕ ಜಿಲ್ಲೆಯ ಅಭಿವೃದ್ಧಿಗೆ ಮತ್ತಷ್ಟು ವೇಗ ನೀಡಬೇಕು ಎಂದು ಒತ್ತಾಯಿಸಿದರು. ಪ್ರಸ್ತುತ ರಾಯಚೂರು ಜಿಲ್ಲೆಯಲ್ಲಿ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರು ಸೇರಿ ಹಲವು ಜನಪ್ರತಿನಿಧಿಗಳಿದ್ದು, ಇವರಲ್ಲಿ ಒಬ್ಬರಿಗೆ ಸಚಿವ ಸ್ಥಾನ ನೀಡಲೇಬೇಕು ಎಂಬ ಅಭಿಪ್ರಾಯ ಪಕ್ಷದ ಕಾರ್ಯಕರ್ತರು ಹಾಗೂ ಸಾರ್ವಜನಿಕ ವಲಯದಲ್ಲಿ ವ್ಯಕ್ತವಾಗುತ್ತಿದೆ. ಸಚಿವ ಸ್ಥಾನಕ್ಕಾಗಿ ಮುನ್ನೆಲೆಗೆ ಬಂದಿರುವ ಪ್ರಮುಖ ನಾಯಕರಲ್ಲಿ ಶಾಸಕ ಹಂಪನಗೌಡ ಬಾದರ್ಲಿ, ಹಂಪಯ್ಯ ನಾಯಕ್, ಬಸನಗೌಡ ದದ್ದಲ್ ಮತ್ತು ಬಸನಗೌಡ ತುರ್ವಿಹಾಳ್, ವಿಧಾನ ಪರಿಷತ್ ಸದಸ್ಯರಾದ ಎ. ವಸಂತಕುಮಾರ್ ಹಾಗೂ ಬಸನಗೌಡ ಬಾದರ್ಲಿ ಅವರ ಹೆಸರುಗಳು ಕೇಳಿಬರುತ್ತಿವೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಜಮೀರ್ ಅಹ್ಮದ್ ಖಾನ್ ಹಾಗೂ ರಹೀಮ್ ಖಾನ್ ಅವರಿಗೆ ಸಚಿವ ಸ್ಥಾನ ನೀಡಿರುವುದಕ್ಕೆ ಮತ್ತು ಯು.ಟಿ. ಖಾದರ್ ಅವರನ್ನು ವಿಧಾನಸಭೆಯ ಸ್ಪೀಕರ್ ಆಗಿ ನೇಮಕ ಮಾಡಿರುವುದಕ್ಕೆ ಸಮುದಾಯದ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಅಲ್ಲದೆ, ಸೈಯದ್ ನಾಸಿರ್ ಹುಸೇನ್ ಮತ್ತು ಮನ್ಸೂರ್ ಅಲಿ ಖಾನ್ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಆಯ್ಕೆ ಮಾಡಿರುವ ಕಾಂಗ್ರೆಸ್ ಪಕ್ಷದ ತೀರ್ಮಾನವನ್ನು ಸ್ವಾಗತಿಸಿ ಹೈಕಮಾಂಡ್‌ಗೆ ಧನ್ಯವಾದ ಅರ್ಪಿಸಿದರು.

## ಸಮಾಜ ಸೇವಕಿ ನೀಲಮ್ಮಗೌಡ್ತಿಗೆ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ಪಟ್ಟಣದ ವೀರರಾಣಿ ಕಿತ್ತೂರು ಚೆನ್ನಮ್ಮ ಪುತ್ಥಳಿ ಪ್ರತಿಷ್ಠಾಪನಾ ಸೇವಾ ಸಮಿತಿ ಅಧ್ಯಕ್ಷರಾದ ನೀಲಮ್ಮಗೌಡ್ತಿ ಪಾಟೀಲ ಇವರನ್ನು ಪೂಜ್ಯರ ಸಮ್ಮುಖದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.**



ಸೋಮವಾರ ಪಟ್ಟಣದ ರಾಜವಾಡೆ ಆವರಣದಲ್ಲಿ ರಾಣಿ ಚೆನ್ನಮ್ಮ ಪುತ್ಥಳಿ ಪ್ರತಿಷ್ಠಾಪನಾ ಸಮಿತಿ ವತಿಯಿಂದ ಹಮ್ಮಿಕೊಂಡ ಸಾಮೂಹಿಕ ವಿವಾಹ ಕಾರ್ಯಕ್ರಮದ ವೇದಿಕೆಯಲ್ಲಿ ಅವರಿಗೆ ಈ ಸನ್ಮಾನ ನೀಡಲಾಯಿತು. ಮಾವಿನಭಾಯಿಯ ಪೂಜ್ಯ ಬಸವರಾಜ ದೇವರು, ಜಮ್ಮಲದಿನ್ನಿಯ ಸಿದ್ದರಾಮ ದೇವರು, ಹಿಕ್ಕನಗುತ್ತಿ ಪೂಜ್ಯ ಪ್ರಭುಲಿಂಗ ಮಹಾಸ್ವಾಮಿಗಳು, ಬೆಕಿನಾಳದ ಪೂಜ್ಯ ಮಹೇಶ ಮುತ್ಯಾ,ಕೋಳೂರ ಹಿರೇಮಠದ ಪೂಜ್ಯ ಸಂತೋಷ ಸ್ವಾಮೀಜಿ, ರಕ್ಕಸಗಿಯ ಪೂಜ್ಯ ಶರಣಯ್ಯ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಮಿತಿಯ ಪದಾಧಿಕಾರಿಗಳಾದ ವಿಶ್ವನಾಥ ಪಾಟೀಲ, ಅಂಬಿಕಾ ಪಾಟೀಲ,ರೇಣುಕಾ ಬಿರಾದಾರ, ಕಾಶಿಬಾಯಿ ಶರಣರ, ಮಹದೇವಪ್ಪ ಪಾಟೀಲ, ವಿದ್ಯಾ ವಿಶ್ವನಾಥ ಪಾಟೀಲ,ಬಸವರಾಜ ಕಾಟಾಪೂರ, ಶಿವಲೀಲಾ ಲಿಂಗದಳ್ಳಿ, ರೇಣುಕಾ ಪಾಟೀಲ, ಶಿವಲಿಂಗಮ್ಮ ಪಾಟೀಲ ಮತ್ತಿತರರು ಇದ್ದರು.

## ಮಸ್ಕಿ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿ ಹನುಮೇಶ ಬಾಗೋಡಿ ನೇಮಕ ಗಂಜ್ ವರ್ತಕರ ಸಂಘದಿಂದ ಗೌರವ ಸನ್ಮಾನ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ವತಿಯಿಂದ ಮಸ್ಕಿ ಗ್ರಾಮೀಣ ಬ್ಲಾಕ್ ಕಾಂಗ್ರೆಸ್ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷರಾಗಿ ನೇಮಕಗೊಂಡ ಹನುಮೇಶ ಬಾಗೋಡಿ ತಿಡಿಗೋಳ ಇವರನ್ನು ಸಿಂಧನೂರು ಗಂಜ್ ವರ್ತಕರ ಸಂಘದಿಂದ ಸನ್ಮಾನಿಸಿ, ಗೌರವಿಸಿ, ಪ್ರೋತ್ಸಾಹಿಸಿ, ಅಭಿನಂದಿಸಲಾಯಿತು.**

ಕೆಪಿಸಿಸಿ ಕಾರ್ಯಾಧ್ಯಕ್ಷ ಎ.ವಸಂತಕುಮಾರ, ಶಾಸಕ ಬಸನಗೌಡ ತುರ್ವಿಹಾಳ, ಕಾಂಗ್ರೆಸ್ ಜಿಲ್ಲಾಧ್ಯಕ್ಷರಾದ ಬಸವರಾಜ ಪಾಟೀಲ್ ಇಟಗಿ ಇವರ ಅನುಮೋದನೆ ಮೇರೆಗೆ ಹನುಮೇಶ ಬಾಗೋಡಿ ತಿಡಿಗೋಳ ಇವರನ್ನು ನೇಮಿಸಲಾಗಿದೆ ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ



ರಾಜ್ಯಾಧ್ಯಕ್ಷ ಮಧುಬಂಗಾರಪ್ಪ ಅವರು ಆದೇಶ ಹೊರಡಿಸಿದ್ದಾರೆ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಮಾರ್ಗದರ್ಶನದಲ್ಲಿ ಹಾಗೂ ಸ್ಥಳೀಯ ನಾಯಕರ ಸಹಯೋಗದಲ್ಲಿ ಹಿಂದುಳಿದ ವರ್ಗಗಳ ವಿಭಾಗದಲ್ಲಿ ಸಂಘಟನೆಯ ಬಲವರ್ಧನೆಗೆ ಕಾರ್ಯ ನಿರ್ವಹಿಸಲು ನೇಮಕ ಮಾಡಿರುವ ಹನುಮೇಶ ಬಾಗೋಡಿ ತಿಡಿಗೋಳ ಅವರನ್ನು ಸಿಂಧನೂರು ಗಂಜ್ ವರ್ತಕರ ಸಂಘದ ಪದಾಧಿಕಾರಿಗಳು, ಆತ್ಮೀಯರು, ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿ, ಪ್ರೋತ್ಸಾಹಿಸಿದರು. ಈ ಸಂದರ್ಭದಲ್ಲಿ: ಫಕೀರಪ್ಪ ತಿಡಿಗೋಳ, ಮಲ್ಲಪ್ಪ ಮೈಲಾರ್, ಅಮರೇಶ ಬಾಗೋಡಿ ತಿಡಿಗೋಳ, ಲಕ್ಷ್ಮಣ, ಶಿವಪುತ್ರಪ್ಪ, ಶಿವರಾಜ ಪುರ, ಖಾಲಿಚೀಲ ವಿಜಯಣ್ಣ, ಸಿದ್ದಪ್ಪ, ಪಂಚಯ್ಯಸ್ವಾಮಿ, ಶರಣಯ್ಯಸ್ವಾಮಿ, ಲಿಂಗಪ್ಪ ಕಾನಿಹಾಳ, ಬಸವರಾಜ ಬೊಮ್ಮನಾಳ, ಮುದಿಯಪ್ಪ ಸುಕಾಲಪೇಟೆ, ಪರಸಪ್ಪ ಸುಕಾಲಪೇಟೆ, ಸೇರಿದಂತೆ ಗಂಜ್ ವರ್ತಕರ ಸಂಘದ ಪದಾಧಿಕಾರಿಗಳು ಇದ್ದರು.

## ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ – ಶ್ರದ್ಧಾಭಕ್ತಿಯಿಂದ ನಡೆದ ಯೋಗೀಶ್ವರ ಯಾಜ್ಞವಲ್ಕರ ಜಯಂತ್ಯೋತ್ಸವ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ನಗರದ ಶ್ರೀರಾಮಮಂದಿರದಲ್ಲಿ ಬುಧವಾರ ಯೋಗೀಶ್ವರ ಯಾಜ್ಞವಲ್ಕ್ಯ ಗುರುಗಳ ಜಯಂತ್ಯೋತ್ಸವ ಶ್ರದ್ಧಾ ಭಕ್ತಿಯಿಂದ ನಡೆಯಿತು. ಈ ವೇಳೆ ಮಾತನಾಡಿದ ಪಂಡಿತ ರಾಮಕೃಷ್ಣ ಆಚಾರ ಕಳೆದ ಎಂಟು ವರ್ಷಗಳಿಂದ ಯಜ್ಞವಲ್ಕ ಸೇವಾ ಸಮಿತಿಯವರು ತಾಲೂಕ ಬ್ರಾಹ್ಮಣ ಸಮಾಜ ಹಾಗೂ ವಿಪ್ರ ನೌಕರರ ಸಂಘದ ಸಂಯುಕ್ತಾಶ್ರಯದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳುತ್ತಾ ಬಂದಿರುವುದು ಹೆಮ್ಮೆಯ ಸಂಗತಿ. ವಿಶೇಷವಾಗಿ ಯಾಜ್ಞವಲ್ಕ ಗುರುಗಳ ಜಯಂತಿಯಂದು ವಿದ್ಯಾರ್ಥಿಗಳಿಗೆ ಈ ಪುರಸ್ಕಾರ ಆಶೀರ್ವಾದ ರೂಪದಲ್ಲಿ ದೊರೆಯುತ್ತಿದೆ.**

ಇದು ಅವರ ಬದುಕಿಗೆ ಬೆಳಕಾಗಲಿ ಎಂದು ಆಶಿಸಿದರು. ತಾಲೂಕು ವಿಪ್ರ ನೌಕರರ ಸಂಘದ ಅಧ್ಯಕ್ಷ ಪ್ರಭಾಕರ ಕುಲಕರ್ಣಿ ಮಾತನಾಡಿ ಪ್ರತಿ ವರ್ಷ ಎಲ್ಲರ ಸಹಕಾರದೊಂದಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಈ ವರ್ಷ ನಿವೃತ್ತಿ ಹೊಂದಿದ ಮತ್ತು ಮುಂಬಡ್ತಿ ಪಡೆದ






ಸರ್ಕಾರಿ ನೌಕರರಿಗೆ ಸನ್ಮಾನವನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ವರ್ಷ ಕಾರ್ಯಕ್ರಮ ನಿರಂತರವಾಗಿ ನಡೆಯಲು 'ವಿದ್ಯಾನಿಧಿ'ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ. ಇದಕ್ಕೆ ವಿಪ್ರ ನೌಕರವರ್ಗ ಹಾಗೂ ಸಮಾಜ ಬಾಂಧವರು ಸಹಕರಿಸಬೇಕು ಎಂದು ಮನವಿ ಮಾಡಿದರು. ಯಾಜ್ಞವಲ್ಕ ಸೇವಾ ಸಮಿತಿ ಅಧ್ಯಕ್ಷ ನಾಗೇಂದ್ರ ಕುಮಾರ ಸಾಹುಕಾರ, ಕಾರ್ಯದರ್ಶಿ ಗೋಪಾಲರಾವ್ ಕುಲಕರ್ಣಿ, ಪ್ರಹ್ಲಾದ ಗುಡಿ ವಕೀಲ, ನಗರಸಭೆ ಮಾಜಿ ಸದಸ್ಯ ವೆಂಕಟರಾವ್ (ರಾಜು) ಬಂಡಿ ಮಾತನಾಡಿದರು.ಪ್ರತಿಭಾ ಪುರಸ್ಕಾರ; ಇದೇ ವೇಳೆ ಎಸ್. ಎಸ್. ಎಲ್. ಸಿ.ಹಾಗೂ ಪಿ.ಯು.ಸಿ.ಪರೀಕ್ಷೆಯಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ಮುಂಬಡ್ತಿ ಪಡೆದ ಹಾಗೂ ನಿವೃತ್ತಿಗೊಂಡ ನೌಕರರಿಗೆ ಸನ್ಮಾನ ನಡೆಯಿತು. ಅನೇಕ ವಿದ್ಯಾರ್ಥಿಗಳು, ನೌಕರರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ನರಸಿಂಹಾಚಾರ್ ಪುರೋಹಿತ ಪ್ರಾಸ್ತಾವಿಕವಾಗಿ ಮಾತನಾಡಿದರು. ಅನುಪಮಾ ಎಸ್. ಕುಲಕರ್ಣಿ, ಅರವಿಂದ ನಾವಳ್ಳಿ ಹಾಗೂ ಮಹಾಲಕ್ಷ್ಮಿ ನಿರೂಪಿಸಿದರು. ಮೆರವಣಿಗೆ; ಇದಕ್ಕೂ ಮುನ್ನ ಬೆಳಿಗ್ಗೆ 6 ಗಂಟೆಗೆ ಕಾಡ ಮಾರುತಿ ದೇವಸ್ಥಾನದಿಂದ ಶ್ರೀ ರಾಮಮಂದಿರದವರೆಗೆ ಯಾಜ್ಞವಲ್ಕ ?ಯ ಗುರುಗಳ ಭಾವಚಿತ್ರದ ಮೆರವಣಿಗೆ, ನಂತರ ಪ್ರತಿಷ್ಠಾಪನೆ ಅಷ್ಟೋತ್ತರ, ಸುಪ್ರಭಾತ, ಪಂಚಾಮೃತ ಅಭಿಷೇಕ, ಸತ್ಯನಾರಾಯಣ ಪೂಜೆ ನಡೆಯಿತು.ನಂತರ ಭಕ್ತರಿಗೆ ತೀರ್ಥ ಪ್ರಸಾದ ವ್ಯವಸ್ಥೆ ಮಾಡಲಾಯಿತು. ಸಂಜೆ ಭಜನೆ, ತೊಟ್ಟಿಲು ಸೇವೆ ಹಾಗೂ ಮಹಾಮಂಗಳಾರತಿ ನಡೆದವು.

## ಗೆಜ್ಜಲಗಟ್ಟಿ ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿ ಯಮನಪ್ಪ ಕುಂಬಾರ ಅಧಿಕಾರ ಸ್ವೀಕಾರ

ನೈಜ್ಯ ದೆಸೆ ನ್ಯೂಸ್

**ಅರಕೇರಾ: ಅರಕೇರಾ ದಿಂದಾ ಗೆಜ್ಜಲಗಟ್ಟಿಯವರಗೆ ಒಂದು ದಶಕದ ಸೇವೆ ಯಮನಪ್ಪ ಕುಂಬಾರ ಸಾರ್ವಜನಿಕ ಸೇವೆ ಎಂಬುವದು ಕೇವಲ ಒಂದು ವೃತ್ತಿಯಲ್ಲ.ಅದೊಂದು ಸಮರ್ಪಣೆ ಬದ್ದತೆ ಮತ್ತು ನಿರಂತರ ಶ್ರಮದ ಪ್ರೀತಿಕ.ಇಂತಹ ಸೇವಾ ಮನೋಭಾವಕ್ಕೆ ಉತ್ತಮ ಉದಾಹರಣೆ ಯಮನಪ್ಪ ಕುಂಬಾರ ಅವರ ವೃತಿ ಜೀವನ 2006ರಲ್ಲಿ ಅರಕೇರಾ ಗ್ರಾಮ ಪಂಚಾಯತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ತಮ್ಮ ಸೇವಾ ಪಯಣವನ್ನು ಆರಂಭಿಸಿದರು.**



ಲಿಂಗಸಗೂರು ತಾಲೂಕಿನ ಗೆಜ್ಜಲಗಟ್ಟಿ ಗ್ರಾಮ ಪಂಚಾಯತಿ ಕಾರ್ಯದರ್ಶಿಯಾಗಿ ಬಡ್ತಿಹೊಂದಿದ್ದಾರೆ ಅವರಿಗೆ ಹೊಸ ಸವಾಲುಗಳು ಮತ್ತು ಅವಕಾಶ ಕಾದಿವೆ. ಗೆಜ್ಜೆಲಗಟ್ಟಿ ಗ್ರಾಮದ ಅಭಿವೃದ್ಧಿಗೆ ಸರಕಾರದ ಯೋಜನೆಗಳನ್ನು ಪರಿಣಾಮಲಾರಿಯಾಗಿ ಜಾರಿಗೋಳಿಸಲು. ಗ್ರಾಮಸ್ಥರ ಸಮಸ್ಯೆಗಳಿಗೆ ಸ್ಪಂದಿಸಲು ಮತ್ತು ಪಾರದರ್ಶಕ ಆಡಳಿತವನ್ನು ಒದಗಿಸಲು ಅವರ ಅನುಭವ ಮತ್ತು ದಕ್ಷತೆ ಸಹಕಾರಿಯಾಗಲಿದೆ ಯಮನಪ್ಪ ಕುಂಬಾರ ಅವರ ಈಬಡ್ತಿ ಮತ್ತು ಹೊಸ ಹುದ್ದೆಯು ಸಣ್ಣ ಹುದ್ದೆಯಿಂದ ಆರಂಭಿಸಿ ತಮ್ಮ ಪ್ರಾಮಾಣಿಕ ಶ್ರಮ ಮತ್ತು ಬದ್ದತೆಯಿಂದ ಉನ್ನತ ಸ್ಥಾನಕ್ಕೆರಲು ಸಾಧ್ಯ ಎಂಬುವದಕ್ಕೆ ಉತ್ತಮ ನಿದರ್ಶನವಾಗಿದೆ.

# ವಿದ್ಯುತ್ ಖಾಸಗಿಕರಣ ಸರ್ಕಾರ ಕೈಬಿಡಬೇಕು

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ವಿದ್ಯುತ್ ತಿದ್ದುಪಡಿ ಮಸೂದೆ-2025, ಸಮಾನಂತರ ವಿದ್ಯುತ್ ವಿತರಣಾ ಪರವಾನಿಗೆ ಹಾಗೂ ವಿದ್ಯುತ್ ಕ್ಷೇತ್ರದ ಖಾಸ್ಗೀಕರಣ ಕ್ರಮಗಳನ್ನು ತಕ್ಷಣ ಹಿಂಪಡೆಯುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ಹಾಗೂ ಮಹಿಳಾ ವಿಭಾಗದ ತಾಲೂಕ ಘಟಕದ ವತಿಯಿಂದ ತಹಸಿಲ್ದಾರ್ ಮೂಲಕ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ, ಇಂಧನ ಸಚಿವರು ಹಾಗೂ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಕಾರ್ಯದರ್ಶಿಗಳಿಗೆ**



**ಸೋಮವಾರ ಮನವಿ ಸಲ್ಲಿಸಲಾಯಿತು.**

ಮನವಿ ಪತ್ರದಲ್ಲಿ ವಿದ್ಯುಸೇವೆ ಸಾರ್ವಜನಿಕರ ಮೂಲಭೂತ ಅಗತ್ಯವಾಗಿದ್ದು ಅದರ ಖಾಸಗಿಕರಣದಿಂದ ವಿದ್ಯುತ್ತರ ಏರಿಕೆ, ರೈತರಿಗೆ ನೀಡಲಾಗುತ್ತಿರುವ ಸಬ್ಸಿಡಿ ಮತ್ತು ಉಚಿತ ವಿದ್ಯುತ್ ಯೋಜನೆಗಳಿಗೆ ಧಕ್ಕೆಯಾಗುವ ಸಾಧ್ಯತೆ ಇದೆ. ಅಲ್ಲದೆ ಸಾವಿರಾರು ನೌಕರರ ಉದ್ಯೋಗ ಭದ್ರತೆಗೂ ಕುತ್ತು ಉಂಟಾಗಲಿದ್ದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾದ ಈ ಕ್ರಮವನ್ನು ಸರ್ಕಾರ ಈ ಕೂಡಲೇ ಹಿಂಪಡೆಯಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ರೈತ ಸಂಘ ತಾಳಿಕೋಟಿ ಘಟಕಾಧ್ಯಕ್ಷ ಶ್ರೀಶೈಲ ವಾಲಿಕಾರ, ಮಹಿಳಾ ಅಧ್ಯಕ್ಷೆ ಸುಜಾತಾ ಅವಟಿ, ಸದಸ್ಯರಾದ ಲಿಂಗರಾಜ ಮೇಟಿ, ಬಿ ಎನ್ ಪಾಟೀಲ, ಶ್ರೀಶೈಲ್ ಸಜ್ಜನ, ಶಂಕರಪ್ಪ ಟಕ್ಕಳಕಿ, ಮಲ್ಲಪ್ಪ ಮುದ್ನೂರ, ಅಪ್ಪಯ್ಯ ಕರ್ಕಳಿ ಮಠ, ರಮೇಶಗೌಡ ವಡ್ಡೋಡಗಿ, ಭೀಮಣ್ಣ ಸಜ್ಜನ, ಶ್ರೀಶೈಲ ಸಂಗಾಪೂರ, ಬಾಬು ತಾಳಿಕೋಟಿ, ಲಕ್ಷ್ಮಪ್ಪ ಚಲವಾದಿ, ದೇವರೆಡ್ಡಿ ಬಿರಾದಾರ, ದೇವರಾಜ ಕುಲಕರ್ಣಿ, ಬಸವರಾಜ ವಾಲೀಕರ, ಅಶೋಕಗೌಡ ಪಾಟೀಲ, ಸಿದ್ದು ತಳವಾರ, ಬೋರಮ್ಮ ಕುಂಬಾರ, ಸುವರ್ಣಾ ಬಿರಾದಾರ,ಯಮನವ್ವ ಧನ್ನೂರ, ಸಾವಿತ್ರಿ ವಾಡ್ಕರ, ಲಕ್ಷ್ಮೀಂಬಾಯಿ ಸಜ್ಜನ, ದ್ರಾಕ್ಷಾಯಿಣಿ ಲಿಂಗದಳ್ಳಿ, ದೇವೇಂದ್ರಪ್ಪಗೌಡ ಪಾಟೀಲ, ಸಂಗಣ್ಣ ಸಜ್ಜನ, ಡಿ.ಎ.ಪೀರಾಪೂರ, ರಾಜುಗೌಡ ಕರ್ಕಳ್ಳಿ ಹಾಗೂ ಮಹಿಳಾ ಸದಸ್ಯರು ಇದ್ದರು.

# ಕ್ಯೂ ಆರ್ ಕೋಡ್ ಮೂಲಕ ನಗರ ಪೋಲಿಯೊ ಬೂತ್‌ಗಳ ಮಾಹಿತಿಗೆ ಚಾಲನೆ

ನೈಜ್ಯ ದೆಸೆ ನ್ಯೂಸ್

**ಜೂನ 28 ರಂದು ಜರಗುವ ಹುಟ್ಟಿನಿಂದ 05 ವರ್ಷದೊಳಗಿನ ಮಕ್ಕಳಿಗೆ ಎರಡು ಹನಿ ಪೋಲಿಯೊ ಲಸಿಕೆ ಹಾಕಲಾಗುವ ಪಲ್ಸತ ಪೋಲಿಯೊ ಕಾರ್ಯಕ್ರಮವನ್ನು ಎಲ್ಲ ಇಲಾಖೆಗಳು ತಮಗೆ ಕೊಟ್ಟಿರುವ ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿ ಅಭಿಯಾನವನ್ನು ಯಶಸ್ವಿಗೊಳಿಸಲು ಜಿಲ್ಲಾಧಿಕಾರಿಗಳು ಪೂವಿತಾ ಎಸ್ ಸೂಚಿಸಿದರು.**

ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಅಂಗವಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸಭಾಂಗಣದಲ್ಲಿ ಜರುಗಿದ ಸಭೆಯಲ್ಲಿ ಲ್ಯಾಪ್‌ಟಾಪ್‌ನಲ್ಲಿ ಕ್ಯೂಆರ್ ಕೋಡ್ ಮೂಲಕ ಜಿಲ್ಲೆಯ ರಾಯಚೂರು, ಸಿಂಧನೂರು, ನಗರ ಹಾಗೂ ಮಾನವಿ, ಲಿಂಗಸೂಗೂರು, ದೇವದುರ್ಗ ಪಟ್ಟಣಗಳಲ್ಲಿ ವಿವಿಧ ಸ್ಥಳಗಳಲ್ಲಿ ಅನುಷ್ಠಾನ ಮಾಡುವ ಪೋಲಿಯೊ ಬೂತ್‌ಗಳ ಮಾಹಿತಿ ಪಡೆದು ಮಾತನಾಡುತ್ತಾ, ಈಗಾಗಲೆ ಜಿಲ್ಲೆಯಲ್ಲಿ ಒಟ್ಟು 2,60,002 ಮಕ್ಕಳನ್ನು ಗುರುತಿಸಲಾಗಿದ್ದು, ಮಕ್ಕಳಿಗೆ ಲಸಿಕೆ ನೀಡಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 1,132 ಬೂತ್‌ಗಳು ಹಾಗೂ ಸಂತೆ, ಜಾತ್ರೆ, ಮಾರುಕಟ್ಟೆ,



ರೈಲು ನಿಲ್ದಾಣ, ಬಸ್ ನಿಲ್ದಾಣ, ಜನನಿಬಿಡ ಪ್ರದೇಶ, ಮುಂತಾದವುಗಳಲ್ಲಿ ಲಸಿಕೆ ಹಾಕಲು 53 ಟ್ರಾನ್ಸಿಟ್ ಬೂತ್‌ಗಳು ಹಾಗೂ ವಲಸೆ ಪ್ರದೇಶ, ಕಟ್ಟಡ ಕಾಮಗಾರಿ, ಇಟ್ಟಿಗೆ ಬಟ್ಟಿ, ಕಬ್ಬು ಕಡೆಯುವ ಜಾಗೆ, ಕುರಿಹಟ್ಟಿ, ಕೊಳಚೆ ಪ್ರದೇಶ, ತೋಟದ ಮನೆ, ಮುಂತಾದ ಸ್ಥಳಗಳಲ್ಲಿರುವ ಮಕ್ಕಳಿಗೆ ಲಸಿಕೆ ಹಾಕಲು 33 ಸಂಚಾರಿ ತಂಡ ಹಾಗೂ 248 ಮೇಲ್ವಿಚಾರಕರನ್ನು ನೇಮಿಸಲಾಗಿದ್ದು ನಗರದ ಪ್ರದೇಶದ ಜನತೆಯು ತಮ್ಮ ಮೊಬೈಲ್‌ಗಳ ಸಹಾಯದಿಂದ ಪೂರ್ವದಲ್ಲಿಯೇ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಲು ಎಲ್ಲ ಗ್ರೂಪ್‌ಗಳಿಗೆ ಶೇರ್ ಮಾಡಲು ತಿಳಿಸಿ ನಿಗದಿತ ಗುರಿ ಸಾಧಿಸಲು ಸೂಚಿಸಿದರು.

ಮುಖ್ಯವಾಗಿ ಸಾಲು ರಜೆಗಳ ಹಿನ್ನಲೆ ಮುಂಚಿತವಾಗಿ ಬೂತ್‌ಗಳನ್ನು ಹೊಂದಿದ ಶಾಲೆ, ಅಂಗನವಾಡಿ ಕೇಂದ್ರಗಳನ್ನು ಸ್ವಚ್ಚಗೊಳಿಸಿ ಅಗತ್ಯ ಕುಡಿಯುವ ನೀರಿನ ವ್ಯವಸ್ಥೆ, ಪಾಲಕರಿಗೆ ಕುಳಿತುಕೊಳ್ಳಲು ಸ್ಥಳಾವಕಾಶ ಕಲ್ಪಿಸಲು ಯಾವುದೆ ನ್ಯೂನ್ಯತೆಯಿಲ್ಲದೆ ಸಿದ್ದಪಡಿಸಲು ಸೂಚಿಸಿದರು. ದಿನಾಂಕ 23, 24, 25 ರ ಮೂರು ದಿನಗಳ ಕಾಲ ಪ್ರೀಆಯಕ್ಟಿವಿಟಿ ಮೂಲಕ ಅಂಗನವಾಡಿ, ಖಾಸಗಿ ಮೊಂಟೇಸ್ಸರಿಗಳಲ್ಲಿ ಎಲ್ಲ 05 ವರ್ಷದ ಮಕ್ಕಳಿಗೆ ಲಸಿಕೆ ಲಸಿಕೆ ಹಾಕಲು ಸೂಚಿಸಿದರು.

ಪೂರ್ವ ನಿಗದಿಯಂತೆ ಎಲ್ಲ ಆರೋಗ್ಯ ಕೇಂದ್ರಗಳಿಗೆ ಲಸಿಕೆ ಸಂರಕ್ಷಿಸಲು ಸತತವಾಗಿ ವಿದ್ಯುತ್ ಪೊರೈಕೆ, ಲಸಿಕೆ ಸಾಗಿಸಲು ವಾಹನಗಳ ಒದಗಿಸುವಿಕೆ, ತ್ಯಾಜ್ಯ ವಿಲೇವಾರಿ ವಾಹನಗಳ ಮೂಲಕ ಜಿಂಗಲ್ಸ್ ಹಾಕಲು ಎಲ್ಲ ಸ್ಥಳಿಯ ಸಂಸ್ಥೆಯವರಿಗೆ. ಎರಡು ದಿನಗಳ ಕಾಲ ಸ್ಥಳೀಯ ಹಂತದಲ್ಲಿ ಜಾಥಾ ಹಮ್ಮಿಕೊಳ್ಳಲು ಶಿಕ್ಷಣ ಇಲಾಖೆಯವರಿಗೆ ಸೂಚಿಸಿದರು.

ಜಿಲ್ಲೆಯಾದ್ಯಂತ ಈಗಿನಿಂದಲೇ ಮನೆ ಬೇಟಿಯ ಮೂಲಕ ಪಾಲಕರಿಗೆ ಮಾಹಿತಿ ನೀಡಲಾಗುತ್ತಿದ್ದು, ಪತ್ರಿಕೆಗಳಲ್ಲಿ ಪ್ರಚಾರ, ಮೈಕಿಂಗ್, ಟಾಂ ಟಾಂ, ಸಾಮಾಜಿಕ ಜಾಲತಾಣಗಳ ಮೂಲಕ ಜಾಗೃತಿ ನೀಡಲು ಸೂಚಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಕುಮಾರಸ್ವಾಮಿ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಲ ಸಿದ್ದಪ್ಪ ಪೂಜಾರಿ, ರಾಯಚೂರು ನಗರಾಭಿವೃದ್ಧಿ ಯೋಜನಾ ನಿರ್ದೇಶಕ ಈರಣ್ಣ ಬಿರಾದರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ ಸುರೇಂದ್ರ ಬಾಬು, ಪಲ್ಸ್ ಪೋಲಿಯೊ ಕಾರ್ಯಕ್ರಮದ ಅಧಿಕಾರಿ ಡಾ.ನಂದಿತಾ ಎಮ್. ಎನ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶರಣಮ್ಮ, ಕಾರ್ಮಿಕ ಇಲಾಖೆ ಜಿಲ್ಲಾ ಅಧಿಕಾರಿ ಆರತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಸುನೀತಾ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಕಲ್ಯಾಣಾಧಿಕಾರಿ ಶಿವಮಾನಪ್ಪ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಭೆಯಲ್ಲಿ ಇದ್ದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಬೇಕರಿ ಮತ್ತು ಮಿಠಾಯಿ ತಯಾರಿಕೆ"

"ಬೇಕರಿ ಮತ್ತು ಮಿಠಾಯಿ ತಯಾರಿಕೆ" ವೃತ್ತಿಯ ಒಂದು ವರ್ಷದ ತರಬೇತಿ ಅವಧಿಯಲ್ಲಿ, ಅಭ್ಯರ್ಥಿಗೆ ಉದ್ಯೋಗ ಸಂಬಂಧಿತ ವೃತ್ತಿಪರ ಕೌಶಲ್ಯ, ವೃತ್ತಿಪರ ಜ್ಞಾನ ಹಾಗೂ ಉದ್ಯೋಗಾರ್ಹತಾ ಕೌಶಲ್ಯಗಳಲ್ಲಿ ತರಬೇತಿ ನೀಡಲಾಗುತ್ತದೆ. ಇದಕ್ಕೆ ಜೊತೆಯಾಗಿ ಯೋಜನಾ ಕಾರ್ಯಗಳು, ಪಠ್ಯೇತರ ಚಟುವಟಿಕೆಗಳು ಹಾಗೂ ಉದ್ಯೋಗ ಸ್ಥಳದಲ್ಲಿನ ತರಬೇತಿಯ ಮೂಲಕ ಆತ್ಮವಿಶ್ವಾಸವನ್ನು ಹೆಚ್ಚಿಸಲಾಗುತ್ತದೆ. ವೃತ್ತಿಪರ ಕೌಶಲ್ಯ ವಿಷಯದಲ್ಲಿ ಒಳಗೊಂಡಿರುವ ಮುಖ್ಯ ಅಂಶಗಳು ಹೀಗಿವೆ: ತರಬೇತಿ ಅವಧಿಯಲ್ಲಿ ತರಬೇತುದಾರರು ಪ್ರಾಥಮಿಕ ಚಿಕಿತ್ಸೆ, ಅಗ್ನಿಶಾಮಕ ಕ್ರಮಗಳು, ಪರಿಸರ ನಿಯಮಗಳು ಹಾಗೂ ಸ್ವಚ್ಛತೆ ಮತ್ತು ನಿರ್ವಹಣೆ ಕುರಿತು ತಿಳಿದುಕೊಳ್ಳುತ್ತಾರೆ. ವೃತ್ತಿಗೆ ಸಂಬಂಧಿಸಿದ ಉಪಕರಣಗಳು, ಅಡುಗೆಮನೆ ಸಾಧನಗಳು ಹಾಗೂ ಅಡುಗೆಮನೆಯ ಕಾರ್ಯವಿಧಾನಗಳನ್ನು ಗುರುತಿಸಲು ಕಲಿಯುತ್ತಾರೆ. ವೈಯಕ್ತಿಕ ಸ್ವಚ್ಛತೆ, ಬೇಕರಿ ಉಪಕರಣಗಳ ಸ್ವಚ್ಛತೆ, ಆಹಾರ ನಿರ್ವಹಣೆಯ ಸ್ವಚ್ಛತಾ ಕ್ರಮಗಳು ಹಾಗೂ ರಕ್ಷಣಾತ್ಮಕ ಉಡುಪುಗಳ ಮಹತ್ವವನ್ನು ಅರಿಯುತ್ತಾರೆ. ಬೇಕರಿ ಉಪಕರಣಗಳು ಮತ್ತು ಕೈ ಉಪಕರಣಗಳನ್ನು ಸುರಕ್ಷಿತವಾಗಿ ಬಳಸುವ ವಿಧಾನವನ್ನು ಅಭ್ಯಾಸ ಮಾಡುತ್ತಾರೆ. ಬೇಕರಿಯಲ್ಲಿ ಬಳಸುವ ಮೂಲ ಪದಾರ್ಥಗಳು ಹಾಗೂ ಮಸಾಲೆಗಳನ್ನು ಗುರುತಿಸುತ್ತಾರೆ. ವಿವಿಧ ರೀತಿಯ ಬ್ರೆಡ್ ಮತ್ತು ಕೇಕ್ ತಯಾರಿಕೆಯನ್ನು ಅಭ್ಯಾಸ ಮಾಡುತ್ತಾರೆ. ಜೊತೆಗೆ ವಿವಿಧ ಕೇಕ್‌ಗಳು, ಅಲಂಕಾರ ಲೇಪನ, ರೋಲ್‌ಗಳು ಮತ್ತು ಪೇಸ್ಟ್ರಿಗಳನ್ನು ತಯಾರಿಸುವುದನ್ನು ಕಲಿಯುತ್ತಾರೆ. ವಿವಿಧ ಬಿಸ್ಕತ್‌ಗಳು, ಬೇಯಿಸಿದ ಬಿಸ್ಕತ್‌ಗಳು, ಮಿಠಾಯಿ ಪದಾರ್ಥಗಳು ಹಾಗೂ ವಿವಿಧ ಭಾರತೀಯ ಸಿಹಿತಿಂಡಿಗಳನ್ನು ತಯಾರಿಸುವುದನ್ನೂ ಕಲಿಯುತ್ತಾರೆ. ಸಂಸ್ಥೆಯಲ್ಲಿ ಪ್ರಾಯೋಗಿಕವಾಗಿ ಕಲಿಸಲು ಸಾಧ್ಯವಾಗದ ಚಟುವಟಿಕೆಗಳನ್ನು ಪ್ರದರ್ಶನಗಳ ಮೂಲಕ ವಿವರಿಸಲಾಗುತ್ತದೆ. ಪಠ್ಯಕ್ರಮದ ಅಂತ್ಯದಲ್ಲಿ ನಾಲ್ಕು ವಾರಗಳ ಉದ್ಯೋಗ ಸ್ಥಳ ತರಬೇತಿಯನ್ನು ವಿವಿಧ ಹೋಟೆಲ್‌ಗಳು, ಬೇಕರಿಗಳು ಹಾಗೂ ಮಿಠಾಯಿ ತಯಾರಿಕಾ ಘಟಕಗಳಲ್ಲಿ ಪಡೆಯುತ್ತಾರೆ. ಇದರಿಂದ ಕೈಗಾರಿಕಾ ವಾತಾವರಣದ ಬಗ್ಗೆ ಹೆಚ್ಚಿನ ಪ್ರಾಯೋಗಿಕ ಅನುಭವ ದೊರೆಯುತ್ತದೆ.

## ಮೊಹರಂನ ಸಂದೇಶ ಮತ್ತು ಇಂದಿನ ಯುವಕರ ಜವಾಬ್ದಾರಿ

ನೈಜ್ಯ ದೆಸೆ ನ್ಯೂಸ್ ವಿಶೇಷ

ಮೊಹರಂ ಇಸ್ಲಾಮಿಕ್ ಕ್ಯಾಲೆಂಡರಿನ ಮೊದಲ ತಿಂಗಳಾಗಿದೆ. ಇದು ಕೇವಲ ಹೊಸ ವರ್ಷದ ಆರಂಭವಲ್ಲ, ತ್ಯಾಗ, ಸಹನೆ, ಸತ್ಯನಿಷ್ಠೆ, ನ್ಯಾಯ ಮತ್ತು ಮಾನವೀಯತೆಯ ಮಹತ್ವವನ್ನು ನೆನಪಿಸುವ ಪವಿತ್ರ ತಿಂಗಳಾಗಿದೆ. ಮೊಹರಂನ 10ನೇ ದಿನವನ್ನು "ಯೌಮೆ ಆಶೂರಾ" ಎಂದು ಕರೆಯಲಾಗುತ್ತದೆ. ಈ ದಿನ ಕರ್ಬಲಾ ಮೈದಾನದಲ್ಲಿ ನಡೆದ ಮಹಾನ್ ಐತಿಹಾಸಿಕ ಘಟನೆಯನ್ನು ಸ್ಮರಿಸಲಾಗುತ್ತದೆ. ಹಜ್ರತ್ ಇಮಾಮ್ ಹುಸೇನ್ (ರ.ಅ.) ಮತ್ತು ಅವರ 72 ಸಹಚರರು ಸತ್ಯ, ನ್ಯಾಯ ಮತ್ತು ಮಾನವೀಯತೆಯ ರಕ್ಷಣೆಗೆ ತಮ್ಮ ಪ್ರಾಣಗಳನ್ನು ತ್ಯಾಗ ಮಾಡಿದರು. ಆದರೆ ಅವರು ಅನ್ಯಾಯ ಮತ್ತು ದೌರ್ಜನ್ಯದ ಮುಂದೆ ತಲೆಬಾಗಲಿಲ್ಲ.

ಕರ್ಬಲಾದ ಘಟನೆ ನಮಗೆ ಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರೂ ಸತ್ಯ ಮತ್ತು ನ್ಯಾಯದ ಮಾರ್ಗವನ್ನು ಬಿಡಬಾರದು ಎಂಬ ಪಾಠವನ್ನು ಕಲಿಸುತ್ತದೆ. ಹಜ್ರತ್ ಇಮಾಮ್ ಹುಸೇನ್ (ರ.ಅ.) ಅವರ ತ್ಯಾಗವು ಕೇವಲ ಮುಸ್ಲಿಮರಿಗಷ್ಟೇ ಅಲ್ಲ, ಇಡೀ ಮಾನವಕುಲಕ್ಕೆ ಪ್ರೇರಣೆಯಾಗಿದೆ. ಅವರ ಹೋರಾಟ ಅಧಿಕಾರ, ಸಂಪತ್ತು ಅಥವಾ ವೈಯಕ್ತಿಕ ಲಾಭಕ್ಕಾಗಿ ಅಲ್ಲ; ಅದು ಸತ್ಯ, ನ್ಯಾಯ ಮತ್ತು ಮಾನವೀಯ ಮೌಲ್ಯಗಳ ರಕ್ಷಣೆಗಾಗಿ ಆಗಿತ್ತು.

ಇಂದಿನ ಯುವಕರು ದೇಶದ ಮತ್ತು ಸಮಾಜದ ಅಮೂಲ್ಯ ಸಂಪತ್ತಾಗಿದ್ದಾರೆ. ಯಾವುದೇ ರಾಷ್ಟ್ರದ ಭವಿಷ್ಯ ಅದರ ಯುವಕರ ಕೈಯಲ್ಲಿರುತ್ತದೆ. ಆದ್ದರಿಂದ ಯುವಕರು ಮೊಹರಂ ಮತ್ತು ಕರ್ಬಲಾದ ಸಂದೇಶವನ್ನು ಅರ್ಥಮಾಡಿಕೊಂಡು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಇಂದಿನ ಸಮಾಜವು ಮಾದಕ ವ್ಯಸನ, ನಿರುದ್ಯೋಗ, ಹಿಂಸಾಚಾರ, ಭ್ರಷ್ಟಾಚಾರ, ಸಾಮಾಜಿಕ ಅಸಮಾನತೆ ಮತ್ತು ನೈತಿಕ ಮೌಲ್ಯಗಳ ಕುಸಿತದಂತಹ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಈ ಸಮಸ್ಯೆಗಳನ್ನು ನಿವಾರಿಸುವಲ್ಲಿ ಯುವಕರ ಪಾತ್ರ ಅತ್ಯಂತ ಮಹತ್ವದ್ದಾಗಿದೆ.

ಯುವಕರು ಉತ್ತಮ ಶಿಕ್ಷಣವನ್ನು ಪಡೆಯಬೇಕು, ತಮ್ಮ ತಂದೆ–ತಾಯಿಗಳು ಮತ್ತು ಗುರುಗಳನ್ನು ಗೌರವಿಸಬೇಕು ಹಾಗೂ ಉತ್ತಮ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು. ಸುಳ್ಳು, ಮೋಸ, ಲಾಲಸೆ ಮತ್ತು ಕೆಟ್ಟ ಸಂಗಡಿಗರಿಂದ ದೂರವಿರಬೇಕು. ಕರ್ಬಲಾದ ಸಂದೇಶವು ಮನುಷ್ಯನ ನಿಜವಾದ ಗುರುತು ಅವನ ಸತ್ಕಾರ್ಯಗಳು ಮತ್ತು ಉತ್ತಮ ನಡವಳಿಕೆಯಲ್ಲಿ ಇದೆ ಎಂಬುದನ್ನು ತಿಳಿಸುತ್ತದೆ. ಆದ್ದರಿಂದ ಯುವಕರು ಪ್ರಾಮಾಣಿಕತೆ, ಪರಿಶ್ರಮ ಮತ್ತು ಸತ್ಯವನ್ನು ತಮ್ಮ ಜೀವನದ ಆಧಾರವಾಗಿಸಿಕೊಳ್ಳಬೇಕು.

ಇಂದಿನ ಯುವಕರ ಮತ್ತೊಂದು ಪ್ರಮುಖ ಜವಾಬ್ದಾರಿ ಸಮಾಜದಲ್ಲಿ ಸಹೋದರತ್ವ, ಪ್ರೀತಿ ಮತ್ತು ಏಕತೆಯನ್ನು ಬೆಳೆಸುವುದಾಗಿದೆ. ಧರ್ಮ, ಜಾತಿ, ಭಾಷೆ ಅಥವಾ ಪ್ರದೇಶದ ಹೆಸರಿನಲ್ಲಿ ದ್ವೇಷವನ್ನು ಹರಡುವ ಬದಲು ಎಲ್ಲರೊಂದಿಗೆ ಗೌರವ ಮತ್ತು ಸೌಹಾರ್ದತೆಯಿಂದ ವರ್ತಿಸಬೇಕು. ಬಡವರು, ಅನಾಥರು, ವಿಧವೆಯರು ಮತ್ತು ಅಗತ್ಯವಿರುವವರಿಗೆ ಸಹಾಯ ಮಾಡುವುದು ಕೂಡ ನಮ್ಮ ಸಾಮಾಜಿಕ ಕರ್ತವ್ಯವಾಗಿದೆ. ಯುವಕರು ಸಮಾಜ ಸೇವೆಯಲ್ಲಿ ಭಾಗವಹಿಸಿದಾಗ ಸಮಾಜ ಮತ್ತು ದೇಶ ಎರಡೂ ಬಲವಾಗುತ್ತವೆ.

ಇಂದಿನ ಡಿಜಿಟಲ್ ಯುಗದಲ್ಲಿ ಯುವಕರು ಸಾಮಾಜಿಕ ಜಾಲತಾಣಗಳನ್ನು ಸರಿಯಾದ ರೀತಿಯಲ್ಲಿ ಬಳಸಬೇಕು. ಸುಳ್ಳು ಸುದ್ದಿಗಳು, ವದಂತಿಗಳು ಮತ್ತು ದ್ವೇಷವನ್ನು ಹರಡುವ ಸಂದೇಶಗಳಿಂದ ದೂರವಿರಬೇಕು. ಬದಲಾಗಿ ಜ್ಞಾನ, ಶಿಕ್ಷಣ, ಸಕಾರಾತ್ಮಕ ಚಿಂತನೆ ಮತ್ತು ಉತ್ತಮ ಸಂದೇಶಗಳನ್ನು ಹಂಚಿಕೊಳ್ಳಬೇಕು. ಇದೇ ಕರ್ಬಲಾದ ನಿಜವಾದ ಸಂದೇಶವಾಗಿದೆ.

ಮೊಹರಂ ನಮಗೆ ಸಂಕಷ್ಟದ ಸಮಯದಲ್ಲೂ ಧೈರ್ಯ, ಸಹನೆ ಮತ್ತು ವಿಶ್ವಾಸವನ್ನು ಕಳೆದುಕೊಳ್ಳಬಾರದು ಎಂದು ಕಲಿಸುತ್ತದೆ. ಹಜ್ರತ್ ಇಮಾಮ್ ಹುಸೇನ್ (ರ.ಅ.) ಅವರು ಅತ್ಯಂತ ಕಠಿಣ ಪರಿಸ್ಥಿತಿಗಳಲ್ಲಿಯೂ ಧೈರ್ಯ ಮತ್ತು ಅಲ್ಲಾಹನ ಮೇಲಿನ ನಂಬಿಕೆಯನ್ನು ಉಳಿಸಿಕೊಂಡಿದ್ದರು. ಇಂತಹ ಗುಣಗಳನ್ನು ಇಂದಿನ ಯುವಕರು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಯಾವುದೇ ಸವಾಲನ್ನು ಯಶಸ್ವಿಯಾಗಿ ಎದುರಿಸಬಹುದು.

ಕೊನೆಯದಾಗಿ, ಮೊಹರಂ ಕೇವಲ ಶೋಕಾಚರಣೆಯ ತಿಂಗಳಲ್ಲ; ಅದು ಆತ್ಮಾವಲೋಕನ, ಆತ್ಮಸಂಶೋಧನೆ ಮತ್ತು ಉತ್ತಮ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಅವಕಾಶವಾಗಿದೆ. ಇಂದಿನ ಯುವಕರು ಕರ್ಬಲಾದ ಸಂದೇಶವನ್ನು ಅರ್ಥಮಾಡಿಕೊಂಡು ತಮ್ಮ ಜೀವನದಲ್ಲಿ ಅನುಸರಿಸಿದರೆ, ಅವರು ತಮ್ಮ ಭವಿಷ್ಯವನ್ನು ಉಜ್ವಲಗೊಳಿಸುವುದರ ಜೊತೆಗೆ ಸಮಾಜ ಮತ್ತು ದೇಶದ ಅಭಿವೃದ್ಧಿಗೂ ಮಹತ್ತರ ಕೊಡುಗೆ ನೀಡಬಹುದು.

ಕರ್ಬಲಾದ ಸಂದೇಶ: ಸತ್ಯಕ್ಕಾಗಿ ಹೋರಾಡಿ, ನ್ಯಾಯದ ಪರ ನಿಲ್ಲಿ, ಮಾನವೀಯತೆಯ ಸೇವೆ ಮಾಡಿ ಮತ್ತು ಅನ್ಯಾಯದ ಮುಂದೆ ಎಂದಿಗೂ ತಲೆಬಾಗಬೇಡಿ. "ಹುಸೈನಿಯತ್ ಜೀವಂತವಾಗಿದೆ, ಏಕೆಂದರೆ ಸತ್ಯ ಮತ್ತು ನ್ಯಾಯ ಎಂದಿಗೂ ಸಾಯುವುದಿಲ್ಲ."



ನೂರುದ್ದೀನ್ ಉಪನ್ಯಾಸಕರು
ಪಾಟೀಲ್ ಪದವಿ ಪೂರ್ವ
ಕಾಲೇಜು ಸಿಂಧನೂರು

## ಸೈಯದ್ ಅಬ್ದುಲ್ ಗಯಾಸ್ ಮಾಧ್ಯಮ ರತ್ನ ಪ್ರಶಸ್ತಿಗೆ ಆಯ್ಕೆ.

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಕಳೆದ 26 ವರ್ಷಗಳಿಂದ ನಿರಂತರವಾಗಿ ಮಾನ್ವಿ ತಾಲೂಕಿನ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸುತ್ತಿರುವ ಸೈಯದ್ ಅಬ್ದುಲ್ ಗಯಾಸ್ ಇವರಿಗೆ ರಾಜ್ಯಮಟ್ಟದ ಮಾಧ್ಯಮ ರತ್ನ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.



ರಾಜ್ಯ ಮಟ್ಟದ ಕಲಾ ಸಂಕುಲ ಸಂಸ್ಥೆ ರಾಯಚೂರು ಇವರ ವತಿಯಿಂದ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಹತ್ತು ಜನ ಸಾಧಕರಿಗೆ ಪ್ರತಿ ವರ್ಷ ನೀಡುವ ಪ್ರಶಸ್ತಿಗೆ ಇವರು ಆಯ್ಕೆಯಾಗಿದ್ದಾರೆ, ಜುಲೈ 5 ರವಿವಾರ ಸಂಜೆ 6 ಗಂಟೆಗೆ ರಾಯಚೂರು ರಂಗಮಂದಿರದಲ್ಲಿ ಪ್ರಧಾನ ಮಾಡಲಿದ್ದಾರೆ. ಮಾನ್ವಿಯ ಪತ್ರಕರ್ತರಾದ ಸೈಯದ್ ಅಬ್ದುಲ್ ಗಯಾಸ್ ಅವರಿಗೆ ಪತ್ರಿಕೋದ್ಯಮ ಕ್ಷೇತ್ರದಲ್ಲಿ ಗುರುತಿಸಿ ಮಾಧ್ಯಮ ರತ್ನ ಪ್ರಶಸ್ತಿ ಪ್ರಧಾನ ಮಾಡಲಾಗುವುದು ಎಂದು ಕಲಾ ಸಂಕುಲ ಸಂಸ್ಥೆ ಕಾರ್ಯದರ್ಶಿ ಮಾರುತಿ ಬಡಿಗೇರ್ ಪತ್ರಿಕೆಗೆ ತಿಳಿಸಿದ್ದಾರೆ.

1ನೇ ಪುಟದಿಂದ....

ಸಲ್ಲಿಸಿದ ಅರ್ಜಿಗಳ ಮರುಪರಿಶೀಲನೆ ಮಾಡಬೇಕು ಎಂದರು. ಅಲ್ಲದೆ ಸಾರ್ವಜನಿಕ ರುದ್ರಭೂಮಿ ಮೀಸಲಿಡುವುದು, ಹಾಳ ಜಾಡಲದನ್ನಿ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕೆ ಜಮೀನು ಮಂಜೂರು, ನಾಗೋಲಿ ಗ್ರಾಮದಲ್ಲಿ ವಸತಿ ಬಡಾವಣೆ ಅಭಿವೃದ್ಧಿ, ಅರಕೇರಾದಲ್ಲಿ ಬಾಲಕರ ಮೆಟ್ರಿಕ್ ನಂತರದ ವಸತಿ ನಿಲಯ ಮಂಜೂರು, ವಿದ್ಯಾರ್ಥಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಸಾತಲರದೊಡ್ಡಿ ಮತ್ತು ಈರಲಕುಂಟಾ ಗ್ರಾಮಗಳ ರಸ್ತೆ ಅಭಿವೃದ್ಧಿಗೆ ಕ್ರಮ ಕೈಗೊಳ್ಳುವಂತೆ ಎಂದು ಕೋರಿದರು.

ತಹಸೀಲ್ದಾರ್ ಅಮರೇಶ ಬಿರದಾರ್ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ ಮನವಿ ಸ್ವೀಕರಿಸಿದರು. ವಸತಿ ನೀವೇಶನ ಬೇಡಿಕೆ ಈಡೇರುವವರೆಗೆ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪ್ರತಿಭಟನಾಕಾರರು ಪಟ್ಟು ಹಿಡಿದರು. ಪಿಡಿಒ ವೆಂಕೋಬ ನಾಯಕ, ಪ್ರತಿಭಟನಾಕಾರರು ಕೋರಿದ ಸರ್ವೆ ನಂಬರಿನಲ್ಲಿ 30 ಎಕರೆ ವಸತಿ ನಿವೇಶನಕ್ಕಾಗಿ ಸ್ಥಳದಲ್ಲೇ ಮೇಲಾಧಿಕಾರಿಗಳಿಗೆ ಪ್ರಸ್ತಾವನೆ ಸಲ್ಲಿಸಿದ ಬಳಿಕ ಪ್ರತಿಭಟನೆ ಹಿಂಪಡೆಯಲಾಯಿತು. ಉಳಿದ ಬೇಡಿಕೆಗಳನ್ನು ಶೀಘ್ರದಲ್ಲೇ ಈಡೇರಿಸದಿದ್ದಲ್ಲಿ ಮುಂದಿನ ದಿನಗಳಲ್ಲಿ ಉಗ್ರ ಹೋರಾಟ ಹಮ್ಮಿಕೊಳ್ಳುವುದಾಗಿ ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು. ಪದಾಧಿಕಾರಿಗಳಾದ ಶಿವಪ್ಪ ಪಲಕನಮರಡಿ, ಶಿವರಾಜ ಕೋರಿ ಗಣಜಲಿ, ಬೂದೆಪ್ಪ ಗಬ್ಬೂರು, ಯೇಸು ಕಮಲದಿನ್ನಿ, ಯೇಸು ಮಸರಕಲ್, ಬಸವರಾಜ ಹುಲಿಗುಡ್ಡ, ನಾಗರಾಜ ಭೇರಿ, ಹೈದರ ಅಲಿ, ಭೀಮಣ್ಣ ವೀರಗೋಟ, ರಂಗಣ್ಣ ದೊರೆ ಬುಂಕಲದೊಡ್ಡಿ, ಹುಲ್ಲೇಶ ಕಾಕರಗಲ್, ರಮೇಶ ಭಾವಿಮನಿ, ರವಿಕುಮಾರ, ಚನ್ನಮ್ಮ ಆಲ್ಕೋಡ, ಸಲೀಂ, ಗಂಗಪ್ಪ ಬಾಗೂರು, ನಾಗಮ್ಮ ಕ್ಯಾದಿಗೇರಾ, ಪಾರ್ವತಿ ಬಾಗೂರು, ಶೇಖಮ್ಮ ಬಾಗೂರು, ಭೀಮಣ್ಣ ರಾಮದುರ್ಗ, ಆಂಜೀನಯ್ಯ ಇತರರಿದ್ದರು.

## ಆಧ್ಯಾತ್ಮಿಕ ಒಲವು ಬೆಳೆಸಿಕೊಳ್ಳಿ: ಪೂಜ್ಯ ಅವಧೂತ ಶ್ರೀ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಎಲ್ಲರಿಗೂ ಒಳ್ಳೆಯ ಜಾಗದಲ್ಲಿ ಕುಳಿತುಕೊಳ್ಳಲು ಸಾಧ್ಯವಾಗುವುದಿಲ್ಲ, ಒಳ್ಳೆಯ ಜಾಗದಲ್ಲಿ ಮಹಾತ್ಮರು ಶರಣರು ಹಾಗೂ ಸಂತರು ಕುಳಿತುಕೊಳ್ಳುತ್ತಾರೆ. ಇಂತಹ ಪಾವನ ಸಮಾರಂಭದಲ್ಲಿ ಕುಳಿತುಕೊಂಡವರು ನಿಜಕ್ಕೂ ಸೌಭಾಗ್ಯವಂತರು ಎಂದು ತೆಲಂಗಾಣದ ಮಲ್ಲಯ್ಯಗಿರಿ ದೇಗುಲಮಡಿ ಆಶ್ರಮದ ಪೀಠಾಧಿಪತಿ ಪೂಜ್ಯ ಶ್ರೀ ಡಾ.ಬಸವಲಿಂಗ ಅವಧೂತರು ಹೇಳಿದರು.



ಸೋಮವಾರ ಸಂಜೆ ಪಟ್ಟಣದ ರಾಜವಾಡೆ ಆವರಣದಲ್ಲಿ ಕಿತ್ತೂರ ರಾಣಿ ಚೆನ್ನಮ್ಮ ಮೂರ್ತಿ ಪ್ರತಿಷ್ಠಾಪನೆ ಅಂಗವಾಗಿ ಹಮ್ಮಿಕೊಂಡ ಧರ್ಮ ಚಿಂತನೋತ್ಸವ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಮಹಾತ್ಮರ ಮಹಾಪುರುಷರ ಸ್ಮರಣೆ ಸೇವೆಯಿಂದ ಪುಣ್ಯ ಪ್ರಾಪ್ತಿ ಆದರೆ, ನಿಂದನೆ ಹಿಂಸೆ ನೀಡಿದರೆ ಪಾಪದ ಫಲ ಅನುಭವಿಸಲೇ ಬೇಕಾಗುತ್ತದೆ. ಶಿವಯೋಗಿ ಯಾದವರು ನಿರ್ಲಿಪ್ತರಾಗಿರುತ್ತಾರೆ. ನಿಂದನೆಗೆ ಕುಗ್ಗದೇ, ಹೊಗಳಿಕೆಗೆ ಹಿಗ್ಗದೆ ಸಮಾಧಾನಿಯಾಗಿರುತ್ತಾರೆ.

ಕಿತ್ತೂರು ರಾಣಿ ಚೆನ್ನಮ್ಮಳ ಕಂಚಿನ ಮೂರ್ತಿ ಪ್ರತಿಷ್ಠಾಪನೆಗೊಳಿಸಿ 12 ದಿನಗಳವರೆಗೆ ಅವಳ ಜೀವನ ಚರಿತ್ರೆ ಕುರಿತು ಪುರಾಣ ಹಾಗೂ ವಿವಿಧ ಧಾರ್ಮಿಕ ಕಾರ್ಯಕ್ರಮವನ್ನು ನೆರವೇರಿಸಿದ ಮಾತೋಶ್ರೀ ನೀಲಮ್ಮಗೌಡ್ತಿ ಪಾಟೀಲರ ಧರ್ಮ ಸೇವೆ ನಿಜಕ್ಕೂ ಮೆಚ್ಚುವಂಥದ್ದು ಅವರು ಸತ್ಯದ ಮಾರ್ಗದಲ್ಲಿದ್ದಾರೆ ಇದರಲ್ಲಿ ಕಷ್ಟಗಳು ಬರುವುದು ಸಹಜ ಅದಕ್ಕೆ ಎದೆಗುಂದದೆ ಮುನ್ನಡೆಯುವ ಅಗತ್ಯ ಇದೆ ಎಂದರು. ಬಳಗಾನೂರ ಗ್ರಾಮದ ಮಾತೋಶ್ರೀ ಮಂಜುಳಾ ಅಮ್ಮನವರು ಮಾತನಾಡಿ ಪೂಜ್ಯ ಅವಧೂತರು ಮಹಾನ್ ತಪಸ್ವಿಗಳಾಗಿದ್ದು ಅವರ ಪುರ ಪ್ರವೇಶದಿಂದ ಇಡೀ ಭೂಮಿ ಪಾವನವಾಗಿದೆ ಎಂದರು. ಹಿಕ್ಕನಗುತ್ತಿ ಲಿಂಗಾಯತ ಮಹಾಮಠದ ಪೀಠಾಧಿಪತಿ ಮ.ನಿ.ಪ್ರ.ಪ್ರಭುಲಿಂಗ ಮಹಾಸ್ವಾಮಿಗಳು ಹಾಗೂ ಅಗ್ನಿಯ ಹನುಮಂತ್ರಾಯ ಶರಣರು ಸಮ್ಮುಖ ವಹಿಸಿದ್ದರು. ಕಿತ್ತೂರ ರಾಣಿ ಚೆನ್ನಮ್ಮ ಮೂರ್ತಿ ಪ್ರತಿಷ್ಠಾಪನಾ ಸೇವಾ ಸಮಿತಿ ಅಧ್ಯಕ್ಷೆ ನೀಲಮ್ಮಗೌಡ್ತಿ ಪಾಟೀಲ, ಪದಾಧಿಕಾರಿಗಳಾದ ರೇಣುಕಾ ಬಿರಾದಾರ, ಕಾಶಿಬಾಯಿ ಶರಣರ, ವಿದ್ಯಾ ವಿಶ್ವನಾಥ ಪಾಟೀಲ, ಗಂಗಾಧರ ಬಿರಾದಾರ ಬಸವರಾಜ ಕಾಟಾಪೂರ, ಶಿವರಾಜ ಪಾಟೀಲ, ಶಿವಲೀಲಾ ಲಿಂಗದಳ್ಳಿ, ರೇಣುಕಾ ಪಾಟೀಲ, ಶಿವಲಿಂಗಮ್ಮ ಪಾಟೀಲ ಹಾಗೂ ಕಿತ್ತೂರಾಣಿ ಚೆನ್ನಮ್ಮಳ ಅಭಿಮಾನಿಗಳು ಇದ್ದರು.

## ಮಹಿಳೆಯರಲ್ಲಿ ಅಗಾಧ ಶಕ್ತಿ ಇದೆ:ಮಾಜಿ ಶಾಸಕ ನಡಹಳ್ಳಿ

ನೈಜ್ಯ ದೆಸೆ ನ್ಯೂಸ್

ತಾಳಿಕೋಟೆ: ಇಂದಿನ ಆಧುನಿಕ ಯುಗದಲ್ಲಿ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುತ್ತಿದ್ದಾರೆ. ಹೆಣ್ಣುಮಗಳು ಮನಸ್ಸು ಮಾಡಿದರೆ ತನ್ನ ಅಡುಗೆ ಮನೆಯಿಂದಲೇ ಉದ್ಯಮ ಪ್ರಾರಂಭಿಸಿ, ಅದನ್ನೇ ಒಂದು ಕಾರ್ಖಾನೆಯಾಗಿ ರೂಪಾಂತರಿಸಬಹುದಾದ ಅಪಾರ ಶಕ್ತಿ ಅವಳಲ್ಲಿದೆ ಎಂದು ಬಿಜೆಪಿ ರಾಜ್ಯ ರೈತ ಮೋರ್ಚಾ ಅಧ್ಯಕ್ಷ ಎ.ಎಸ್. ಪಾಟೀಲ (ನಡಹಳ್ಳಿ) ಹೇಳಿದರು.



ಪಟ್ಟಣದ ಶ್ರೀ ಖಾಸ್ಗತೇಶ್ವರ ಸಭಾಭವನದಲ್ಲಿ ಮಂಗಳವಾರ ನೂತನವಾಗಿ ಆರಂಭವಾದ 'ಅಮ್ಮಾ ಫೌಂಡೇಶನ್ (ರಿ)' ಉದ್ಘಾಟನಾ ಸಮಾರಂಭದಲ್ಲಿ ಜ್ಯೋತಿ ಬೆಳಗಿಸಿ ಮಾತನಾಡಿದ ಅವರು, ಮಹಿಳೆಯರಲ್ಲಿರುವ ಕೌಶಲ್ಯ ಮತ್ತು ಇಚ್ಛಾಶಕ್ತಿಗೆ ಸೂಕ್ತ ವೇದಿಕೆ ದೊರೆತರೆ ಅವರು ಸಮಾಜದಲ್ಲಿ ಮಹತ್ತರ ಸಾಧನೆ ಮಾಡಲು ಸಾಧ್ಯವೆಂದು ಅಭಿಪ್ರಾಯಪಟ್ಟರು. ಪ್ರತಿಯೊಬ್ಬ ಮಹಿಳೆಯೂ ತನ್ನೊಳಗಿನ ಸಾಮರ್ಥ್ಯವನ್ನು ಅರಿತುಕೊಂಡು, "ನಾನು ಸಮಾಜಕ್ಕೆ ಏನು ಕೊಡುಗೆ ನೀಡಬಹುದು?" ಎಂಬ ಆತ್ಮಾವಲೋಕನ ನಡೆಸಬೇಕು.

ಈ ದಿಸೆಯಲ್ಲಿ 'ಅಮ್ಮಾ ಫೌಂಡೇಶನ್' ಮಹಿಳಾ ಸಬಲೀಕರಣಕ್ಕೆ ಪೂರಕವಾದ ವೇದಿಕೆಯಾಗಬೇಕು. ಮುಂದಿನ ದಿನಗಳಲ್ಲಿ ಮಹಿಳೆಯರಿಗಾಗಿ ನಿರಂತರ ಚರ್ಚೆ, ಸಂವಾದ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸುವಂತೆ ಕರೆ ನೀಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮಾಜಿ ಶಾಸಕರಾದ ಶಿವಪುತ್ರಪ್ಪ ಎಂ. ದೇಸಾಯಿ ಮತ್ತು ಸೋಮನಗೌಡ ಬಿ. ಪಾಟೀಲ (ಸಾಸನೂರ) ಅವರು ಮಹಿಳಾ ಸಂಘಟನೆಗಳ ಅಗತ್ಯತೆ ಹಾಗೂ ಸಮಾಜದ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರದ ಕುರಿತು ಮಾತನಾಡಿದರು. ಶ್ರೀಕಾಂತ ಪತ್ತಾರ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ವಿವರಿಸಿದರು.ತಾಳಿಕೋಟೆ ಶ್ರೀ ಖಾಸ್ಗತೇಶ್ವರ ಮಠದ ಆಡಳಿತಾಧಿಕಾರಿ ಮುರಗೇಶ ವೀರಕ್ತಮಠ ಆಶೀರ್ವಚನ ನೀಡಿದರು.

ಅಮ್ಮಾ ಫೌಂಡೇಶನ್ ಅಧ್ಯಕ್ಷೆ ಬಿ.ಕೆ. ಮಣ್ಣೂರ ಸೇರಿದಂತೆ ಎಸ್.ಆರ್. ಬೇನಾಳಮಠ, ಶೇಷಾಚಲ ಹವಾಲ್ದಾರ, ಡಾ. ಗಂಗಾಬಿಕಾ ಪಾಟೀಲ ಹಾಗೂ ವಿದ್ಯಾ ವೀರಕ್ತಮಠ ಜಂಟಿ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ನೂತನ ಪದಾಧಿಕಾರಿಗಳು, ವಿವಿಧ ಘಟಕಗಳ ಸದಸ್ಯರು, ಪಟ್ಟಣದ ನೂರಾರು ಮಹಿಳೆಯರು ಹಾಗೂ ಸಾರ್ವಜನಿಕರು ಭಾಗವಹಿಸಿದರು. ಕಾರ್ಯಕ್ರಮದ ಆರಂಭದಲ್ಲಿ ವಿಶಾಲಾಕ್ಷಿ ಬಡಿಗೇರ್ ಪ್ರಾರ್ಥನೆ ನಡೆಸಿದರು. ಸುರೇಖಾ ಬಿಳೆಭಾವಿ ಸ್ವಾಗತಿಸಿ, ಶ್ರೀಕಾಂತ ಪತ್ತಾರ ಮತ್ತು ಸುಮಂಗಲ ಕೋಳೂರು ನಿರೂಪಣೆ ನಡೆಸಿ, ಕೊನೆಯಲ್ಲಿ ವಂದಿಸಿದರು.

## ಸಾಮೂಹಿಕ ವಿವಾಹ ಶರಣ ಸಂಸ್ಕೃತಿಯ ಪ್ರತೀಕ

ನೈಜ್ಯ ದೆಸೆ ನ್ಯೂಸ್

ತಾಳಿಕೋಟಿ: ಸಾಲ ಮಾಡಿ ದುಂದು ವೆಚ್ಚ ಮಾಡದೆ ಯಾವುದೇ ಜಾತಿ ಮತ ಪಂಥ ಎನ್ನದೇ ಹತ್ತಾರು ಪೂಜ್ಯರು, ಸತ್ಪುರುಷರು, ಬಂಧು–ಬಳಗ ಹಾಗೂ ಸಾವಿರಾರು ಜನರ ಮಧ್ಯೆ ನಡೆಯುವ ಸಾಮೂಹಿಕ ವಿವಾಹಗಳು ಶ್ರೇಷ್ಠ ವಿವಾಹಗಳು ಆಗಿದ್ದು ಇಂದಿನ ಸಮಾಜಕ್ಕೆ ಅತ್ಯಗತ್ಯವಾಗಿವೆ ಎಂದು ಮಾವಿನಭಾವಿಯ ಪರಮಪೂಜ್ಯ ಬಸವರಾಜ ದೇವರು ಹೇಳಿದರು.




ಸೋಮವಾರ ಪಟ್ಟಣದ ರಾಜವಾಡೆ ಆವರಣದಲ್ಲಿ ರಾಣಿ ಚೆನ್ನಮ್ಮ ಪುತ್ಥಳಿ ಪ್ರತಿಷ್ಠಾಪನಾ ಸಮಿತಿ ವತಿಯಿಂದ ಹಮ್ಮಿಕೊಂಡ ಸಾಮೂಹಿಕ ವಿವಾಹ ಕಾರ್ಯಕ್ರಮದ ಸಾನಿಧ್ಯ ವಹಿಸಿ ಅವರು ಆಶೀರ್ವಚನ ನೀಡಿದರು. ಜಮ್ಮಲದಿನ್ನಿಯ ಪೂಜ್ಯ ಸಿದ್ದರಾಮ ದೇವರು ಮಾತನಾಡಿ ಬಂಗಾರ ಸೇರಿದಂತೆ ಎಲ್ಲಾ ವಸ್ತುಗಳ ಬೆಲೆ ಏರಿಕೆಯಾಗಿದೆ ಇದರ ಜೊತೆಗೆ ಕಡಿಮೆ ಮಳೆಯಾಗಿ ಬರಗಾಲದ ಪರಿಸ್ಥಿತಿ ಬಂದಿರುವ ಸಮಯದಲ್ಲಿ ಇಂತಹ ಸಾಮೂಹಿಕ ವಿವಾಹಗಳು ಆರ್ಥಿಕ ಹೊರೆಯನ್ನು ಕಡಿಮೆ ಮಾಡುತ್ತವೆ. ಸಾಮೂಹಿಕ ವಿವಾಹಗಳು ಬಡ ಕುಟುಂಬಗಳಿಗೆ ವರದಾನವಾಗಿವೆ ಇಂಥಹ ಪುಣ್ಯ ಕಾರ್ಯವನ್ನು ಮಾಡಿದ ಸಮಿತಿಯ ಅಧ್ಯಕ್ಷರಾದ ನೀಲಮ್ಮಗೌಡ್ತಿ ಪಾಟೀಲ ಅವರಿಗೆ ಅಭಿನಂದಿಸುತ್ತೇವೆ ಎಂದರು. ರಾಣಿ ಚೆನ್ನಮ್ಮ ಪುತ್ಥಳಿ ಪ್ರತಿಷ್ಠಾಪನಾ ಸಮಿತಿಯ ಅಧ್ಯಕ್ಷೆ ನೀಲಮ್ಮಗೌಡ್ತಿ ಪಾಟೀಲ ಮಾತನಾಡಿ ಕಳೆದ ಮೂರು ವರ್ಷಗಳಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂದಿದ್ದೇನೆ ಸಾಮೂಹಿಕ ವಿವಾಹ ಕಾರ್ಯಕ್ರಮಗಳು ಮಾಡಲು ಸಾಧ್ಯವಾಗಿರಲಿಲ್ಲ ಈ ಬಾರಿ ಕಡಿಮೆ ಸಮಯದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಇದರ ಯಶಸ್ವಿಗೆ ಶಕ್ತಿ ಮೀರಿ ಪ್ರಯತ್ನಿಸಲಾಗಿದೆ ಮುಂದಿನ ವರ್ಷ ಇದಕ್ಕಿಂತಲೂ ಹೆಚ್ಚು ದೊಡ್ಡ ಪ್ರಮಾಣದಲ್ಲಿ ಮಾಡಲು ಪ್ರಯತ್ನಿಸಲಾಗುವುದು ಎಂದರು.

ರಾಜವಾಡೆಯ ರಾಣಿ ಚೆನ್ನಮ್ಮ ಮೂರ್ತಿ ಪ್ರತಿಷ್ಠಾಪನೆ ಸ್ಥಳದ ಮುಂಭಾಗದಲ್ಲಿ ನಿರ್ಮಾಣ ಮಾಡಿದ ವೇದಿಕೆಯಲ್ಲಿ ಎಲ್ಲ ಪೂಜ್ಯರ ಸಮ್ಮುಖದಲ್ಲಿ 3 ಜೋಡಿಗಳ ಸಾಮೂಹಿಕ ವಿವಾಹವನ್ನು ಧಾರ್ಮಿಕ ಪದ್ಧತಿಯಂತೆ ನೆರವೇರಿಸಲಾಯಿತು. ಬೆಕಿನಾಳದ ಪೂಜ್ಯ ಮಹೇಶ ಮುತ್ಯಾ,ಕೋಳೂರ ಹಿರೇಮಠದ ಪೂಜ್ಯ ಸಂತೋಷ ಸ್ವಾಮೀಜಿ, ರಕ್ಕಸಗಿಯ ಪೂಜ್ಯ ಶರಣಯ್ಯ ಸ್ವಾಮೀಜಿ ಸಮ್ಮುಖ ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಮಿತಿಯ ಪದಾಧಿಕಾರಿಗಳಾದ ವಿಶ್ವನಾಥ ಪಾಟೀಲ, ಅಂಬಿಕಾ ಪಾಟೀಲ,ರೇಣುಕಾ ಬಿರಾದಾರ, ಕಾಶಿಬಾಯಿ ಶರಣರ, ಮಹದೇವಪ್ಪ ಪಾಟೀಲ, ವಿದ್ಯಾ ವಿಶ್ವನಾಥ ಪಾಟೀಲ,ಬಸವರಾಜ ಕಾಟಾಪೂರ, ಶಿವಲೀಲಾ ಲಿಂಗದಳ್ಳಿ, ರೇಣುಕಾ ಪಾಟೀಲ, ಶಿವಲಿಂಗಮ್ಮ ಪಾಟೀಲ ಮತ್ತಿತರರು ಇದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101